ಸಂಪುಟ : 8 ಸಂಚಿಕೆ : 246 ಪುಟ : 4 ಬೆಲೆ : 3.00 ಮಂಗಳವಾರ ನವ್ಹಂಬರ್ 07, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 246 Pages : 4 Price : 3.00 Tuesday November 07, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ: ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ನವೆಂಬರ್ 7 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನ. 2 ವೆಲ್‌ಫೇರ್ ಟೌನ್‌ಶಿಪ್ ಸ್ಲಾಬ್ ಮನಿ, ಹನುಮಂತ ದೇವರ ಗುಡಿ ಲೈನ್, ಗಾಂಧಿನಗರ ಸಬ್‌ಜೆಲ್ ರೋಡ್, ಹಾಕಿ ಕ್ರೀಡಾಂಗಣದ ಹಿಂಭಾಗ, ಕೆಸಿ ಪಾರ್ಕ್ ಬಲಭಾಗ, ವಾರ್ಡ್ ನಂ. 11ರಲ್ಲಿ ನಿಸರ್ಗ ಬಡಾವಣೆ, ರಿಂಗ್‌ರೋಡ್ ಒಂದನೇ ಕ್ರಾಸ್, ವೀರೇಶ್ವರ ನಗರ ಗಾರ್ಡನ್, ಸಾಯಿಬಾಬಾ ಗುಡಿಯ ಮುಂದಿನ ಭಾಗ, ಮೂರನೇ ಕ್ರಾಸ್, ಅಬ್ದುಲ್ ಕಲಾಂ ಮಂದಿರ್ ರೋಡ್,

ವಾರ್ಡ್ ನಂ. 28ರಲ್ಲಿ ಪಂಚಾಕ್ಷರಿ ನಗರ 5ನೇ ಕ್ರಾಸ್, ಈಶ್ವರಗುಡಿ ಲೈನ್, ವಾರ್ಡ್ ನಂ. 5 6 ರಲ್ಲಿ ಪಿಪಿ ಗುಡಿ ಲೈನ್, ಮಿಸ್ಕಿನ್ ಅವರ ಪ್ಲಾಟ್, ರೇಣುಕಾಚಾರ್ಯ ಕಲ್ಯಾಣ ಮಂಟಪ, ಹನುಮಂತದೇವರ ಗುಡಿ ಲೈನ್, ಬಾಳಿಕಾಯಿಯವರ ಲೈನ್, ಹೊನ್ನಪ್ಪಜ್ಜನ್ ಲೈನ್, ಪಾಟೀಲ್ ಅವರ ಲೈನ್, ಕೆಲವು ಉಳಿದ ಭಾಗಗಳು ವಾರ್ಡ್ ನ. 20, 21, 23, ಎಲಿಗಾರ್ ಪ್ಲಾಟ್, ಲಕ್ಷ್ಮೇಶ್ವರ ಲೈನ್, ಅಕ್ಷಾ ಮಸೂತಿ ಲೈನ್, ಜಕ್ಕಲಿ ಅವರ ಲೈನ್, ಕರಬಿಷ್ಟಿಯವರ ಲೈನ್, ಮುಲ್ಲಾ ಫ್ಯಾಕ್ಟರಿ ಲೈನ್, ಶರಣಪ್ಪ ಲೈನ್, ಪಾಟೀಲ್ ಅವರ ಲೈನ್, ನಾಗಪ್ಪನ ಕಟ್ಟಿ ಲೈನ್, ಅಂಗನವಾಡಿ ಲೈನ್, ನಾಗಲಿಂಗ ನಗರ ಭಾಗ-1,2

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ


■ ವಿಜಯಸಾಕ್ಷಿ ಸುದ್ದಿ, ಗದಗ

ಪುರಸಭೆ ಕಾರ್ಯಾಲಯ ಗಜೇಂದ್ರಗಡ ವ್ಯಾಪ್ತಿಯಲ್ಲಿ ಬರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ 2023-24ನೇ ಸಾಲಿನ ದೀನ ದಯಾಳ ರಾಷ್ಟ್ರೀಯ ನಗರ ಜೀವನೋಪಾಯ ರಾಜ್ಯ ಅಭಿಯಾನ ಯೋಜನೆಯ ವಿವಿಧ ಉಪಘಟಕದಡಿ ಸ್ವಯಂ ಉದ್ಯೋಗಕ್ಕಾಗಿ ಬಡ್ಡಿ ಸಾಲ ವಿತರಣೆ (ವೈಯಕ್ತಿಕ ಮತ್ತು ಗುಂಪು) ಸ್ವ ಸಹಾಯ ಗುಂಪುಗಳ ರಚನೆ, ಸ್ವ ಸಹಾಯ ಸಂಘಕ್ಕೆ ಬ್ಯಾಂಕ್ ಸಂಪರ್ಕ, ಬೀದಿ ಬದಿ ವ್ಯಾಪಾರಸ್ಥರಿಗೆ ಗುರುತಿನ ಚೀಟಿ ವಿತರಣೆಗೆ ಹಾಗೂ 3ನೇ ವ್ಯಕ್ತಿ ಸರ್ವೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮಹಿಳಾ ಸ್ವ ಸಹಾಯ 18 ಗುಂಪು ರಚನೆ, 18 ರಿಂದ 43 ವಯೋಮಾನದ ಆಸಕ್ತಿಯುಳ್ಳ ಹಾಗೂ ಅರ್ಹ ಫಲಾನುಭವಿಗಳು ಅಗತ್ಯ ದಾಖಲೆಯೊಂದಿಗೆ ನಿಗದಿತ ಅರ್ಜಿ ನಮೂನೆಯನ್ನು ದ್ವಿ ಪ್ರತಿಯಲ್ಲಿ ಮುಖ್ಯಾಧಿಕಾರಿಗಳು ಪುರಸಭೆ ಕಾರ್ಯಾಲಯದ ಗಜೇಂದ್ರಗಡ ವಿಳಾಸಕ್ಕೆ ನವೆಂಬರ್ 22 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪುರಸಭೆಯ ಡೇ/ನಲ್ಮ್ ಶಾಖೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಗಜೇಂದ್ರಗಡ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ಗದಗ ಜಿಲ್ಲೆಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ

■ ವಿಜಯಸಾಕ್ಷಿ ಸುದ್ದಿ, ಗದಗ



ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ನವೆಂಬರ್ 7 ರಂದು ಮಧ್ಯಾಹ್ನ 2 ಗಂಟೆಗೆ ಕೊಪ್ಪಳದಿಂದ ಗದುಗಿಗೆ ಆಗಮಿಸಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗದಗ ಜಿಲ್ಲೆ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು.

ಸಂಜೆ 7 ಗಂಟೆಗೆ ರಸ್ತೆ ಮೂಲಕ ಹುಬ್ಬಳ್ಳಿಗೆ ತೆರಳಿ ಅಲ್ಲಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣ ಮಾಡುವರು ಎಂದು ಸಚಿವರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿಗೆ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಸಮಾಜ ಕಲ್ಯಾಣ ಇಲಾಖೆಯ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿಗೆ ( ಯುಪಿಎಸ್‌ಸಿ/ ಕೆಎಎಸ್ , ಬ್ಯಾಂಕಿಂಗ್, ಗ್ರುಪ್-ಸಿ, ಆರ್‌ಆರ್‌ಬಿ, ಎಸ್‌ಎಸ್‌ಸಿ, ಜ್ಯುಡಿಷಿಯರಿ ಸರ್ವಿಸಸ್) ಮತ್ತು ವಸತಿಯುತ ಸಂಯೋಜಿತ ಪದವಿಯೊಂದಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಇಲಾಖಾ ವೆಬ್ ಸೈಟ್ www.sw.kar.nic.in ರಲ್ಲಿ ನವೆಂಬರ್ 29 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಗದಗ/ಮುಂಡರಗಿ/ಶಿರಹಟ್ಟಿ/ರೋಣ/ನರಗುಂದ ಇವರಿಗೆ ಸಂಪರ್ಕಿಸಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ಒನಕೆ ಓಬವ್ವ ಜಯಂತಿ ಕುರಿತು ಪೂರ್ವಭಾವಿ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ



ನವೆಂಬರ್ 11 ರಂದು ವೀರರಾಣಿ ಒನಕೆ ಓಬವ್ವ ಜಯಂತಿ ಆಚರಿಸುವ ಅಂಗವಾಗಿ ನವೆಂಬರ್ 7 ರಂದು ಮಂಗಳವಾರ ಬೆಳಿಗ್ಗ 11 ಗಂಟೆಗೆ ಅಪರ ಜಿಲ್ಲಾಧಿಕಾರಿಗಳು ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಸಮಾಜದ ಮುಖಂಡರು ಸಭೆಗೆ ಹಾಜರಾಗಿ ತಮ್ಮ ಸಲಹೆ/ ಅಭಿಪ್ರಾಯಗಳನ್ನು ತಿಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗ್ರಾ.ಪಂ ಅಧ್ಯಕ್ಷರು, ಅಭಿವೃದ್ಧಿ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಶಿಬಿರದಲ್ಲಿ ಪಾಲಿವಾಲ

# ಪ್ರಾಮಾಣಿಕ ಕೆಲಸಗಳಿಂದ ಗ್ರಾಮದ ಅಭಿವೃದ್ಧಿ ಸಾಧ್ಯ

■ ವಿಜಯಸಾಕ್ಷಿ ಸುದ್ದಿ, ರೋಣ




ರೋಣ ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ರವಿ.ಎ.ಎನ್ ಮಾತನಾಡಿ, ಇವತ್ತು ಡಾ. ಶ್ಯಾಮ ಸುಂದರ ಅವರ ಮೂಲಕ ನಾವೆಲ್ಲರೂ ಸ್ಫೂರ್ತಿ ಹೊಂದಿದ್ದೇವೆ. ಕೇವಲ ಗ್ರಾಮ ಪಂಚಾಯತಿ ಅಲ್ಲಿ ಕೆಲಸ ಮಾಡಿದ್ದಕ್ಕೆ ಪದ್ಮಶ್ರೀ ಸಿಗಲಿಕ್ಕಿಲ್ಲ. ಅವರು ಪರಸರದ ಜೊತೆಗೆ ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಹಳ್ಳಿಯನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಬೇಕು, ನನ್ನ ಊರಿಗೆ ಯಾವ ಕಾಮಗಾರಿ ಬೇಕು, ಯಾವುದು ಅವಶ್ಯಕತೆ ಇದೆ ಎಂದು ಅಧ್ಯಕ್ಷರು ಪರಿಶೀಲಿಸಿ ಮುಂದುವರೆದಾಗ ಯಶಸ್ಸು ಸಿಗುತ್ತದೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷರು ಪ್ರಾಮಾಣಿಕತೆಯಿಂದ, ಅಧಿಕಾರಿಗಳ ಜೊತೆಗೂಡಿ ಕೆಲಸ ಮಾಡಿದರೆ ನಿಮ್ಮ ಗ್ರಾಮದ ಜೊತೆಗೆ ದೇಶವೇ ಅಭಿವೃದ್ಧಿ ಹೊಂದಲು ಸಾಧ್ಯ. ಯಾವಾಗ ನೀವು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರೋ ಆಗ ದೇವರಿಗೂ ಸಹ ಹೆದರುವ ಅವಶ್ಯಕತೆ ಇಲ್ಲ ಎಂದು ಪದ್ಮಶ್ರೀ ಪುರಸ್ಕೃತ ಶ್ಯಾಮ ಸುಂದರ ಪಾಲಿವಾಲ ಹೇಳಿದರು.

ರೋಣ ಪಟ್ಟಣದ ತಾಲೂಕು ಪಂಚಾಯಿತಿ ಸಭಾಭವನದಲ್ಲಿ ಜಿಲ್ಲಾ ಪಂಚಾಯತ ಹಾಗೂ ರೋಣ-ಗಜೇಂದ್ರಗಡ ತಾಲೂಕು ಪಂಚಾಯಿತಿ ಸಹಯೋಗದೊಂದಿಗೆ ಗ್ರಾಮ ಪಂಚಾಯತ ಅಧ್ಯಕ್ಷರು, ಅಭಿವೃದ್ಧಿ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ತರಬೇತಿಯನ್ನುದ್ದೇಶಿಸಿ ಮಾತನಾಡಿದರು.

ಮೂಲತಃ ರಾಜಸ್ಥಾನ ರಾಜ್ಯದ ಉದಯಪುರ ಜಿಲ್ಲೆಯ ಪಿಪಲಾಂತ್ರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿರುವ ಶ್ಯಾಮಸುಂದರ ಪಾಲಿಮಾರ ಅವರು 30 ವರ್ಷಗಳ ಅವಧಿಯಲ್ಲಿ ಹೆಣ್ಣು ಭ್ರೂಣಹತ್ಯೆ ತಡೆ, ನೀರಿನ ಸಂರಕ್ಷಣೆ, ಪರಿಸರ ಸಂರಕ್ಷಣೆ ಕುರಿತು ಗ್ರಾಮದಲ್ಲಿ ಸಾಕಷ್ಟು ಕೆಲಸ ಮಾಡಿ ಮಹತ್ವದ ಬದಲಾವಣೆ ಪಡೆದುಕೊಂಡ ದೇಶದ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಕಾರ್ಯಕ್ರಮದಲ್ಲಿ ಗ್ರಾ.ಪಂ ಅಧ್ಯಕ್ಷರ ಜೊತೆಗೆ ಸಮಾಲೋಚನೆ ಹಾಗೂ ಸಂವಾದ ನಡೆಸಿ ಮಾತನಾಡಿದ ಅವರು, ನಮ್ಮ ಪಿಪಲಾಂತ್ರಿ ಗ್ರಾಮದಲ್ಲಿ ಹೆಣ್ಣು ಮಗು ಹುಟ್ಟಿದರೆ 111 ಗಿಡಗಳನ್ನು ನೆಡುವ ಮೂಲಕ ಹಬ್ಬದ ವಾತಾವರಣ ಏರ್ಪಡಿಸುತ್ತೇವೆ. ಅದಕ್ಕೆ ಮುಖ್ಯ ಕಾರಣ ಪರಿಸರ ಸಂರಕ್ಷಣೆ ಜೊತೆಗೆ ಹೆಣ್ಣು ಭ್ರೂಣಹತ್ಯೆ ತಡೆಗಟ್ಟವದು ನಮ್ಮ ಪ್ರಮುಖ ಗುರಿಯಾಗಿತ್ತು. ಗ್ರಾಮದಲ್ಲಿ ಸರ್ಕಾರದ ಯೋಜನೆಗಳನ್ನು ಬಳಸಿಕೊಂಡು ಅಭಿವೃದ್ಧಿಪಡಿಸಲಾಗಿದೆ. ಸರ್ಕಾರದ ಯೋಜನೆಗಳನ್ನು ಸರಿಯಾಗಿ ಬಳಸಿಕೊಂಡು ಪ್ರಾಮಾಣಿಕ ಕೆಲಸ ಮಾಡಿದರೆ ನಿಮ್ಮ ಗ್ರಾಮದಲ್ಲಿ ಏನಾದರೂ ಅಭಿವೃದ್ಧಿ ಮಾಡಲು ಸಾಧ್ಯ ಎಂದರು.

ಜಿ.ಪಂ ಉಪ ಕಾರ್ಯದರ್ಶಿ ಸಿ.ಆರ್ ಮುಂಡರಗಿ ಮಾತನಾಡಿ, ಪ್ರತಿ ಗ್ರಾಮದಲ್ಲಿ ನರೇಗಾ ಯೋಜನೆಯಡಿಯಲ್ಲಿ ರಸ್ತೆ, ಸಮುದಾಯ ಭವನ ಸೇರಿದಂತೆ ಇತರ ಕಾಮಗಾರಿಗಳನ್ನು ಎಲ್ಲರೂ ಮಾಡುತ್ತಾರೆ. ಆದರೆ ನೀವು ಮಾಡಿದ ಕೆಲಸ ನಿಮಗೆ ತೃಪ್ತಿ ಕೊಡಬೇಕು. ಜೊತೆಗೆ ಮುಂದಿನ ದಿನಗಳಲ್ಲಿ ಅದು ನಾನು ಮಾಡಿದ ಕೆಲಸ ಎಂದು ಹೆಮ್ಮೆಯಿಂದ ಹೇಳುವಂತಾಗಬೇಕು ಎಂದರು.

ಜಿ.ಪಂ ಸಹಾಯಕ ಜಿಲ್ಲಾ ಕಾರ್ಯಕ್ರಮ ಸಂಯೋಜಕ ಕಿರಣ ಕುಮಾರ ಎಸ್.ಎಚ್. ಮಾತನಾಡಿ, ಗ್ರಾ.ಪಂ ವ್ಯಾಪ್ತಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರದ ಹಲವಾರು ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ನೀವು ಸಹ ವಿಶೇಷ ರೀತಿಯಲ್ಲಿ ಕೆಲಸ ಮಾಡುವ ಮೂಲಕ ಕೀರ್ತಿ ಗಳಿಸಬೇಕೆಂದು ಆಶಿಸಿದರು.

ಗಜೇಂದ್ರಗಡ ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ಡಿ.ಮೋಹನ, ಗದಗ ತಾಲೂಕಾ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಯ್ಯ, ರೋಣ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಆರ್. ಬಿಳಗಿ, ತಾ.ಪಂ ಯೋಜನಾಧಿಕಾರಿ ಸಿ.ಎಸ್. ನೀಲಗುಂದ, ರೋಣ ತಾ.ಪಂ ಸಹಾಯಕ ನಿರ್ದೇಶಕ( ಗ್ರಾ.ಉ) ರಿಯಾಜ್ ಖತೀಬ್, ತಾ.ಪಂ ಸಿಬ್ಬಂದಿಗಳು, ನರೇಗಾ ಸಿಬ್ಬಂದಿಗಳು, ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ರೋಣ ಹಾಗೂ ಗಜೇಂದ್ರಗಡ ತಾಲೂಕು ವ್ಯಾಪ್ತಿಯ ಗ್ರಾ.ಪಂ ಅಧ್ಯಕ್ಷರು ಹಾಜರಿದ್ದರು.

### ಜನತಾ ದರ್ಶನ ಕಾರ್ಯಕ್ರಮದ ತರುವಾಯ ಸಚಿವ ಸಂತೋಷ್ ಲಾಡ್ ಪ್ರತಿಕ್ರಿಯೆ

## ಅಕ್ರಮ ತಡೆಗೆ ಸಾರ್ವಜನಿಕರ ಸಹಕಾರವೂ ಮುಖ್ಯ



ಜನತಾ ದರ್ಶನದಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ 57, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಗೆ ಸಂಭಂದಿಸಿದ 25, ಮಹಾನಗರ ಪಾಲಿಕೆಗೆ ಸಂಬಂಧಿಸಿದ 55 ಹಾಗೂ ಇತರೆ ಇಲಾಖೆಗಳಿಗೆ ಸಂಭಂದಿಸಿದ 60 ಅರ್ಜಿಗಳು ಸೇರಿದಂತೆ ಒಟ್ಟು 197 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಇಂದಿನ ಜನತಾ ದರ್ಶನದಲ್ಲಿ ಜಿಲ್ಲೆಯ ವಿವಿಧ ಗ್ರಾಮ ಹಾಗೂ ಪಟ್ಟಣಗಳಿಂದ ಆಗಮಿಸಿದ್ದ ಸಾರ್ವಜನಿಕರು ಸುಮಾರು 197 ಅಹವಾಲುಗಳನ್ನು ಸಲ್ಲಿಸಿದ್ದು, ನಿಯಮಾನುಸಾರ ಪರಿಶೀಲಿಸಿ, ಪರಿಹಾರಕ್ಕೆ ಕ್ರಮವಹಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಅವರು ಸೋಮವಾರ ಮಧ್ಯಾಹ್ನ ಜನತಾ ದರ್ಶನ ಕಾರ್ಯಕ್ರಮದ ನಂತರ ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು.

ಸಾರ್ವಜನಿಕರ ಅಹವಾಲುಗಳಲ್ಲಿ ವಸತಿ, ಪೋಡಿ, ವಾಟ್ನಿ, ಹೊಲಗಳಿಗೆ ದಾರಿ ಹಾಗೂ ವೈಯಕ್ತಿಕ ಸಮಸ್ಯೆಗಳ ಕುರಿತು ಅರ್ಜಿ ಬಂದಿವೆ. ಅವುಗಳನ್ನು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ, ಇತ್ಯರ್ಥ ಮಾಡಲಿದ್ದಾರೆ. ಸರಕಾರದ ಹಂತದಲ್ಲಿ ಆಗಬೇಕಾದ ಇತ್ಯರ್ಥಗಳನ್ನು ಸರಕಾರಕ್ಕೆ ಕಳುಹಿಸಲಾಗುವುದು ಎಂದು ಅವರು ಹೇಳಿದರು.

ಜಿಲ್ಲೆಯಲ್ಲಿ ಭೂ ಮಾಫಿಯಾ ಮತ್ತು ಡ್ರಗ್ಸ್ ಮಾಫಿಯಾ ತಡೆಗಟ್ಟಲು ಪೊಲೀಸ್ ಇಲಾಖೆ ಅಧಿಕಾರಿಗಳ ಸಭೆ ಜರುಗಿಸಿ, ಕಠಿಣ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಇತ್ತಿಚೆಗೆ ಧಾರವಾಡ ನಗರದಲ್ಲಿ ಅನಧಿಕೃತವಾಗಿ ಮನೆ ನೆಲಸಮಗೊಳಿಸಿದ ಪ್ರಕರಣಕ್ಕೆ ಸಂಭಂದಿಸಿದಂತೆ ಓರ್ವ ವ್ಯಕ್ತಿಯನ್ನು ಬಂಧಿಸಿ, ಮನೆ ಕೆಡವಲು ಬಳಸಿದ್ದ ಜೆಸಿಬಿ ಸೀಜ್ ಮಾಡಲಾಗಿದೆ. ಇಂತಹ ಆತುರ, ಅನ್ಯಾಯದ ಕ್ರಮಗಳನ್ನು ಸಹಿಸುವುದಿಲ್ಲ. ಯಾರೇ ಆಗಿದ್ದರೂ ಕಠಿಣ ಕ್ರಮಕೈಗೊಳ್ಳುವದಾಗಿ ಸಚಿವರು ಎಚ್ಚರಿಸಿದರು.

ಭೂ, ಡ್ರಗ್ಸ್ ಮಾಫಿಯಾ ತಡೆಗಟ್ಟಲು ಸಾರ್ವಜನಿಕರ ಸಹಕಾರವೂ ಮುಖ್ಯ. ಯಾವುದೇ ಸ್ಥಳದಲ್ಲಿ ಇಂತಹ ಅಕ್ರಮಗಳು, ಡ್ರಗ್ಸ್ ಸಂಗ್ರಹ, ಮಾರಾಟದ ಮಾಹಿತಿ ಇದ್ದರೆ ನೇರವಾಗಿ ನನಗೆ, ಡಿಸಿ, ಎಸ್.ಪಿ ಅಥವಾ ಪೊಲೀಸ್ ಕಮಿಷನರ್ ಅವರಿಗೆ ಕರೆ ಮಾಡಿ ತಿಳಿಸಿ. ಅಂತಹ ಮಾಹಿತಿದಾರರ ವಿವರಗಳನ್ನು ಗೌಪ್ಯವಾಗಿ ಇಡಲಾಗುತ್ತದೆ. ಪೊಲೀಸ್ ಕಾವಲು ಮತ್ತು ದಾಳಿಗಳ ಹೆಚ್ಚಳದಿಂದಾಗಿ ಹೆಚ್ಚು ಹೆಚ್ಚು ಪ್ರಕರಣಗಳು ಈಗ ಬೆಳಕಿಗೆ ಬರುತ್ತಿವೆ. ಪೊಲೀಸ್ ಇಲಾಖೆ ಚುರುಕಾಗಿ ಕಾರ್ಯ ಮಾಡುತ್ತಿದೆ. ಅವರು ಇನ್ನೂ ಹೆಚ್ಚು ಚುರುಕಾಗಿ ಕೆಲಸ ಮಾಡಲು ಸೂಚಿಸಲಾಗಿದೆ ಎಂದರು.

## ವಸತಿ ನಿಲಯದ ಪ್ರವೇಶಕ್ಕೆ ಅವಧಿ ವಿಸ್ತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಗದಗ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಂದ ವಸತಿ ನಿಲಯ ಪ್ರವೇಶಕ್ಕೆ ಇಂಜಿನಿಯರಿಂಗ್, ಮೆಡಿಕಲ್, ಬಿಎಡ್ ಹಾಗೂ ಪ್ಯಾರಾಮೆಡಿಕಲ್ ಕೋರ್ಸ್‌ಗಳು ಪ್ರಾರಂಭವಾಗುವ ಹಿನ್ನಲೆಯಲ್ಲಿ, ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಪ್ರವೇಶ ಬಯಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಡ್ಡಾಯವಾಗಿ ತಿತಿತಿ.ತಿ.ಇಚಿಡಿ.ಟಿಛಿ.ಟಿ ವೆಬ್‌ಸೈಟ್‌ನಲ್ಲಿ 2023-24ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಎಂಬ ಲಿಂಕ್‌ನಡಿ ಎಸ್.ಎಚ್.ಪಿ (ಸ್ಟೇಟ್ ಹಾಸ್ಟೆಲ್ ಪೋರ್ಟಲ್) ಮೂಲಕ ವಿದ್ಯಾರ್ಥಿಗಳು ಖಾತೆ ಸೃಜಿಸಿದ ನಂತರ ಮೆಟ್ರಿಕ್ ನಂತರದ ವಸತಿ ನಿಲಯಕ್ಕೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವ ದಿನಾಂಕವನ್ನು ನವೆಂಬರ್ 30-ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಸಂಪರ್ಕಿಸಬಹುದಾಗಿದೆ. ಗದಗ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಗದಗ 08372-297258/9480843128. ರೋಣ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ರೋಣ 08381-267120/9480843131. ಶಿರಹಟ್ಟಿ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಶಿರಹಟ್ಟಿ 08487-242312/9480843132. ಮುಂಡರಗಿ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಮುಂಡರಗಿ 08371-262449/9480843129. ನರಗುಂದ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ನರಗುಂದ 08377-245731/9480843130.

## ದೀಪಾವಳಿ ಹಬ್ಬಕ್ಕೆ ವಾಯವ್ಯ ಸಾರಿಗೆ ಸಂಸ್ಥೆಯಿಂದ 500ಕ್ಕೂ ಹೆಚ್ಚು ವಿಶೇಷ ಬಸ್ ವ್ಯವಸ್ಥೆ



■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಬೆಳಕಿನ ಹಬ್ಬ ದೀಪಾವಳಿ ಆಚರಣೆಗೆ ರಾಜ್ಯದ ಹಾಗೂ ಹೊರ ರಾಜ್ಯಗಳ ವಿವಿಧ ಸ್ಥಳಗಳಿಂದ ಆಗಮಿಸುವ ಹಾಗೂ ಹಬ್ಬ ಮುಗಿಸಿಕೊಂಡು ಹಿಂದಿರುಗುವ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ 500ಕ್ಕೂ ಹೆಚ್ಚು ವಿಶೇಷ ಬಸ್ ಗಳ ವ್ಯವಸ್ಥೆ ಮಾಡಲಾಗಿದೆ.

ನವೆಂಬರ್ 11ರಂದು ವಾರಾಂತ್ಯ ಶನಿವಾರ, 12 ರಂದು ಭಾನುವಾರ, ನರಕ ಚತುರ್ದಶಿ, 13 ರಂದು ಸೋಮವಾರ ಅಮವಾಸೆ, ಲಕ್ಷ್ಮೀ ಪೂಜೆ ಹಾಗೂ 14ರಂದು ಮಂಗಳವಾರ ಬಲಿಪಾಡ್ಯಮಿ ಇದೆ.

ಹಬ್ಬ ಆಚರಿಸಲು ನ. 10ರಂದು ಶುಕ್ರವಾರ ಮತ್ತು 11 ರಂದು ಶನಿವಾರ ಬೆಂಗಳೂರು, ಮಂಗಳೂರು, ಗೋವಾ, ಮಹಾರಾಷ್ಟ್ರದ ಪುಣೆ ಸೇರಿದಂತೆ ರಾಜ್ಯದ ಮತ್ತು ನೆರೆಯ ರಾಜ್ಯಗಳ ವಿವಿಧ ಭಾಗಗಳಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಸ್ವಂತ ಊರುಗಳಿಗೆ ಬರುವ ನಿರೀಕ್ಷೆ ಇದೆ.

ಹಬ್ಬಕ್ಕೆ ಆಗಮಿಸುವ ಪ್ರಯಾಣಿಕರಿಗೆ ಅನುಕಲವಾಗುವಂತೆ ನ.10 ಹಾಗೂ11ರಂದು ಬೆಂಗಳೂರು, ಮಂಗಳೂರು, ಪುಣೆ, ಗೋವಾ ಮತ್ತಿತರ ಸ್ಥಳಗಳಿಂದ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಚಿಕ್ಕೋಡಿ, ಉತ್ತರ ಕನ್ನಡ, ಹಾವೇರಿ, ಬಾಗಲಕೋಟೆ ಮತ್ತಿತರ ಪ್ರಮುಖ ಸ್ಥಳಗಳಿಗೆ ಹೆಚ್ಚುವರಿ ಬಸ್ ಗಳನ್ನು ವ್ಯವಸ್ಥೆ ಮಾಡಲಾಗಿದೆ.

ಇದಕ್ಕಾಗಿ ಮಲ್ಟಿಆ್ಯಕ್ಸಲ್ ವೋಲ್ವೊ, ಸ್ಲೀಪರ್, ರಾಜಹಂಸ ಮುಂತಾದ 50 ಪ್ರತಿಷ್ಠಿತ ಐಷಾರಾಮಿ ಬಸ್ಸುಗಳು ಹಾಗೂ 200 ವೇಗದೂತ ಸಾರಿಗೆಗಳು ಸೇರಿದಂತೆ 250ಕ್ಕೂ ಹೆಚ್ಚು ಹೆಚ್ಚುವರಿ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ. ಅಲ್ಲದೇ ಸ್ಥಳೀಯ ಬಸ್ ನಿಲ್ದಾಣಗಳಿಂದ ಜಿಲ್ಲೆಯೊಳಗೆ ಹಾಗೂ ನೆರೆಯ ಜಿಲ್ಲೆಗಳಿಗೆ ಪ್ರಯಾಣಿಕರ ದಟ್ಟಣೆಗೆ ತಕ್ಕಂತೆ ಹೆಚ್ಚುವರಿ ಬಸ್ ಗಳನ್ನು ಓಡಿಸಲಾಗುತ್ತದೆ.

ಅದೇ ರೀತಿ ಹಬ್ಬ ಮುಗಿಸಿಕೊಂಡು ಸ್ವಂತ ಊರುಗಳಿಂದ ಹಿಂದಿರುವ ಪ್ರಯಾಣಿಕರ ಅನುಕೂಲಕ್ಕಾಗಿ ನ. 15 ರಿಂದ 19ರವರೆಗೆ ಸಂಸ್ಥೆಯ ವ್ಯಾಪ್ತಿಯ ಪ್ರಮುಖ ಬಸ್ ನಿಲ್ದಾಣಗಳಿಂದ ಬೆಂಗಳೂರು, ಮಂಗಳೂರು, ಗೋವಾ, ಮಹಾರಾಷ್ಟ್ರದ ಪುಣೆ ಸೇರಿದಂತೆ ರಾಜ್ಯದ ಮತ್ತು ನೆರೆಯ ರಾಜ್ಯಗಳ ಪ್ರಮುಖ ಸ್ಥಳಗಳಿಗೆ ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ 250ಕ್ಕೂ ಹೆಚ್ಚು ವಿಶೇಷ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲಾಗುತ್ತದೆ.

**ಮುಂಗಡ ಬುಕ್ಕಿಂಗ್; ರಿಯಾಯಿತಿ:**

ಸಂಸ್ಥೆಯ ವೆಬ್ ಸೈಟ್ www.ksrtc.in ಅಥವಾ KSRTC Mobile App, ಪ್ರಮುಖ ಬಸ್ ನಿಲ್ದಾಣಗಳಲ್ಲಿರುವ ಟಿಕೆಟ್ ಬುಕ್ಕಿಂಗ್ ಕೌಂಟರ್‌ಗಳು ಹಾಗೂ ಖಾಸಗಿ ಫ್ರಾಂಚೈಸಿ ▶▶ 3ನೇ ಪುಟಕ್ಕೆ

### ಹಜರತ್ ಮೆಹಬೂಬ ಸುಬಾನಿ ಉರುಸ್ ಸಮಿತಿಯಿಂದ ಜಿಲ್ಲಾ ಮಟ್ಟದ ಗ್ರಾಮೀಣ ಕ್ರೀಡೆ

## ಮೈಮರೆಸಿದ ಟಗರಿನ ಕಾಳಗ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ



ಸ್ಪರ್ಧೆಯಲ್ಲಿ ಭಾಗವಹಿಸಿದ ಟಗರು ರೋಷದಿಂದ ನುಗ್ಗಿ, ಮತ್ತೊಂದು ಟಗರನ್ನು ತಡೆದು ತಲೆಗೆ ತಲೆ ಡಿಚ್ಚಿ ಕೊಟ್ಟು ಹೋರಾಡುತ್ತದೆ. ಮೂರರಿಂದ ನಾಲ್ಕು ಬಾರಿ ಡಿಚ್ಚಿ ಕೊಟ್ಟ ಬಳಿಕ ಯಾವ ಟಗರು ಹೋರಾಡದೆ ನಿಲ್ಲುತ್ತದೆಯೋ ಅದು ಸ್ಪರ್ಧೆಯಲ್ಲಿ ಸೋತಂತೆ. ಇದನ್ನು ಆಧರಿಸಿ ಗೆಲುವನ್ನು ನಿರ್ಧಾರ ಮಾಡಲಾಗುತ್ತದೆ.

ಜೀಗೇರಿ ಕಿಂಗ್ ಜಿಗೇರಿ, ಸೆವೆನ್ ಸ್ಟಾರ್ ಸುಲ್ತಾನ್, ಬಳ್ಳಾರಿ ನಾಗ್, ಅಂಜನಿ ಪುತ್ರ ಹೀಗೆ ಹತ್ತಾರು ಹೆಸರುಗಳನ್ನು ಇಟ್ಟುಕೊಂಡ ಟಗರುಗಳು ಸ್ಪರ್ಧೆಯಲ್ಲಿ ಸೆಣಸಾಟ ನಡೆಸಿದವು. ಅದರಲ್ಲೂ ಜೀಗೇರಿ ಕಿಂಗ್, ಅಂಜನಿ ಪುತ್ರ, ಗೋಗೇರಿ ಗಿಡ್ಡ ಸೇರಿ ಮಾರಿ ನಡುವೆ ನಡೆದ ಟಗರಿನ ಕಾಳಗ ರೋಮಾಂಚನಗೊಳಿಸಿತು.

ಕಾಲು ಕರೆದು ರಭಸದಿಂದ ಪರಸ್ಪರ ಮುಖಾಮುಖಿ ಡಿಚ್ಚಿ ಹೊಡೆಯುವ ಟಗರುಗಳು, ಧೂಳೆಬ್ಬಸಿ ಬರುವ ಟಗರುಗಳನ್ನು ನಿಯಂತ್ರಿಸುವ ಮಾಲಿಕರು, ನೆರೆದಿದ್ದ ಜನರ ಶಿಳ್ಳೆ ಹಾಗೂ ಚಪ್ಪಾಳೆಯೊಂದಿಗೆ ಹುರಿದುಂಬಿಸುವ ದೃಶ್ಯ ಮೈದಾನದಲ್ಲಿ ನೆರೆದವರನ್ನು ರೋಮಾಂಚನಗೊಳಿಸಿತು.

ಪಟ್ಟಣದ ರಾಜವಾಡೆ ಎದುರಿನ ಬಯಲು ಜಾಗೆಯಲ್ಲಿ ಹಜರತ್ ಮಹೆಬುಸಬಾನಿ ಉರಸು ನಿಮಿತ್ತ ಸ್ಥಳೀಯ ಉರುಸು ಸಮಿತಿಯಿಂದ ಜಿಲ್ಲಾ ಮಟ್ಟದ ಗ್ರಾಮೀಣ ಕ್ರೀಡೆ ಆಯೋಜಿಸಿದ್ದು, ಟಗರು ಕಾಳಗದ ಚಿತ್ರಣಕ್ಕೆ ನೆರೆದಿದ್ದವರು ಫಿದಾ ಆದರು. ಗದಗ, ಹಾವೇರಿ, ಬಾಗಲಕೋಟೆ, ಕೊಪ್ಪಳ, ಹುಯಿಲಗೋಳ ಸೇರಿ ವಿವಿಧ ಜಿಲ್ಲೆಗಳಿಂದ ನೂರಾರು ಟಗರುಗಳ ಮಾಲೀಕರು ಕಾದಾಟದಲ್ಲಿ ಪಾಲ್ಗೊಂಡಿದ್ದರು.

ಹಾಲು ಹಲ್ಲು, 2 ಹಲ್ಲು, 4 ಹಲ್ಲು, 6 ಹಲ್ಲು ಮತ್ತು 8 ಹಲ್ಲುಗಳ ಟಗರುಗಳು ಕಾಳಗದಲ್ಲಿ ತಲೆಗೆ ತಲೆ ಕೊಟ್ಟು ಶಕ್ತಿ ಪ್ರದರ್ಶನ ನೀಡಿದವು. ಅಲ್ಲದೇ ಒಂದಕ್ಕೊಂದು ಗುದ್ದುವುದರ ಮೂಲಕ ಕಾಳಗ ನಡೆಸಿ ನೆರೆದಿದ್ದ ನೂರಾರು ಜನರಲ್ಲಿ ರೋಮಾಂಚನ ಮೂಡಿಸಿದವು. ಪ್ರೇಕ್ಷಕರು ಟಗರು ▶▶ 3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

ನಾನು ಹಿಡಿಯುವ ದಾರಿಯಂತೆ ನಮ್ಮ ಗುರಿ ಸಹ ಇರುತ್ತದೆ. ಗುರಿಗಿಂತ ದಾರಿ ಮುಖ್ಯ

–ಸುಭಾಷಿತ

## ಸಂಪಾದಕೀಯ

# ಬಿಜೆಪಿ ಬರ ಅಧ್ಯಯನ ರಾಜಕಾರಣ

ರಾಜ್ಯದಲ್ಲಿ ಮುಂಗಾರು ಮತ್ತು ಹಿಂಗಾರು ಮಳೆ ಕೈಕೊಟ್ಟು ಭೀಕರ ಬರ ಆವರಿಸಿದೆ. ರಾಜ್ಯದ ಬಹುತೇಕ ಎಲ್ಲಾ ತಾಲೂಕುಗಳನ್ನ ಬರಪೀಡಿತ ಎಂದು ಸರ್ಕಾರ ಘೋಷಣೆ ಮಾಡಿದೆ. ರಾಜ್ಯ ಸರ್ಕಾರದ ನಿರ್ಣಯದ ನಂತರ ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡವು ಕರ್ನಾಟಕಕ್ಕೆ ಭೇಟಿ ನೀಡಿ ಮರಳಿತು.

ಸದ್ಯ ರಾಜ್ಯದಲ್ಲಿ ಬರ ಕಾಮಗಾರಿಗಳು ಆರಂಭವಾಗಬೇಕಿದೆ. ಎನ್ ಡಿ ಆರ್ ಎಫ್ ನಿಯಮದ ಪ್ರಕಾರ ರೈತರಿಗೆ ಪರಿಹಾರ ಸಿಗಬೇಕಿದೆ. ಮುಖ್ಯವಾಗಿ ಉದ್ಯೋಗ ಖಾತ್ರಿ ಯೋಜನೆಯನ್ನ ಮತ್ತಷ್ಟು ವಿಸ್ತರಿಸಿ ದುಡಿಯುವ ಕೈಗಳಿಗೆ ಕೆಲಸ ಕೊಡಬೇಕು.

ಆ ಮೂಲಕ ಗ್ರಾಮೀಣ ಭಾಗದ ಜನ ಉದ್ಯೋಗ ಅರಸಿ ಗುಳೆ ಹೋಗುವುದನ್ನು ತಪ್ಪಿಸಬೇಕಾಗಿದೆ.

ಬರ ಘೋಷಣೆಯ ನಂತರ ಸರ್ಕಾರದ ಮುಂದೆ ಇಷ್ಟೊಂದು ಸವಾಲುಗಳು ಇವೆ. ಬರ ಘೋಷಣೆಯ ನಂತರ ಕ್ಷೇತ್ರಗಳ ಸಮಸ್ಯೆಗಳ ಬಗ್ಗೆ ಕಿಂಚಿತ್ತು ಕಾಳಜಿ ವಹಿಸದ ಬಿಜೆಪಿ ಮುಖಂಡರು ರಾಜ್ಯಾದ್ಯಂತ ಸಂಚರಿಸಿ ಬರ ಅಧ್ಯಯನ ಮಾಡುತ್ತಿದ್ದಾರೆ.

ಪರಿಹಾರ ನೀಡಬೇಕಾದಂತಹ ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡ, ಯಾವೆಲ್ಲಾ ರೀತಿಯಲ್ಲಿ ಅಧ್ಯಯನ ನಡೆಸುತ್ತದೆ ಎನ್ನುವುದನ್ನು ರಾಜ್ಯದ ಜನ ಕಂಡಿದ್ದಾರೆ. ಅಧಿಕಾರಿಗಳ ಕಾಟಾಚಾರದ ಬರ ಅಧ್ಯಯನದಂತೆ ಬಿಜೆಪಿ ಮುಖಂಡರ ಅಧ್ಯಯನವೂ ಕಾಟಾಚಾರದಂತೆಯೇ ನಡೆಯುತ್ತಿದೆ.

ಬಿಜೆಪಿ ಮುಖಂಡರು ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ವಿಫಲವಾಗಿರುವುದನ್ನು ಸಮರ್ಪಕವಾಗಿ ಖಂಡಿಸುವುದನ್ನು ಬಿಟ್ಟು, ಬರ ಅಧ್ಯಯನದ ನೆಪದಲ್ಲಿ ರಾಜ್ಯಾದ್ಯಂತ ಸಂಚರಿಸಿ ಸರ್ಕಾರದ ವಿರುದ್ಧ ಸುಖ ಸುಮ್ಮನೆ ಆರೋಪ ಮಾಡುವುದನ್ನು ಮಾಡುತ್ತಿದ್ದಾರೆ.

ತೆರೆ ಮರೆಯಲ್ಲಿ ಕುಳಿತ ಬಿಜೆಪಿ ವರಿಷ್ಠರು ನೀಡಿದ ಸೂಚನೆಯಂತೆ, ಆಯಾ ಭಾಗದ ಪ್ರಮುಖರು ಕ್ಷೇತ್ರಗಳಿಗೆ ಭೇಟಿ ನೀಡಿ ಒಂದು ಪತ್ರಿಕಾಗೋಷ್ಠಿ ನಡೆಸುವುದು ಬರ ಅಧ್ಯಯನದ ಭಾಗವಾಗಿದೆ.

ಇಂತಹ ಕಾಟಚಾರದ ಅಧ್ಯಯನ ನಡೆಸುವುದನ್ನು ಬಿಟ್ಟು, ಬಿಜೆಪಿ ಮುಖಂಡರು ಕೇಂದ್ರದ ಮೇಲೆ ಒತ್ತಡ ತಂದು, ಹೆಚ್ಚಿನ ಅನುದಾನ ಬಿಡುಗಡೆಗೆ ಯತ್ನಿಸಬೇಕಾಗಿದೆ. ರಾಜ್ಯದ ಬರ ಪರಿಸ್ಥಿತಿಯನ್ನ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು, ರಾಜ್ಯ ಸರ್ಕಾರದ ವೈಫಲ್ಯವನ್ನು ತಿಳಿಸಿ, ಜನರಿಗೆ ಅನುಕೂಲವಾಗುವಂತಹ ಕೆಲಸಕ್ಕೆ ಬಿಜೆಪಿ ಮುಖಂಡರು, ಸಂಸದರು ಮಾಡಬೇಕಿದೆ.

ಕೇಂದ್ರದಲ್ಲಿ ರಾಜ್ಯದ 25 ಜನ ಸಂಸದರಿದ್ದರು, ಅವರೆಲ್ಲರೂ ಕನ್ನಡದ ನೆಲ ಜಲ ಭಾಷೆಯ ವಿಚಾರಕ್ಕೆ ಬಂದಾಗ ಮೌನ ಮುರಿದಿದ್ದು ಕಡಿಮೆ. ಇನ್ನಾದರೂ ಆ ಸಂಸ್ಕೃತಿಗೆ ತಿಲಾಂಜಲಿ ನೀಡುವ ಕೆಲಸ ಬಿಜೆಪಿ ಮಾಡಬೇಕಿದೆ.

## ಹೆಲ್ಪಿಂಗ್ ಹ್ಯಾಂಡ್ಸ್ ಫೌಂಡೇಶನ್-ಅಪ್ಪುರಾಜ ಇವೆಂಟ್ಸ್‌ನಿಂದ ಸಂಭ್ರಮದ ರಾಜ್ಯೋತ್ಸವ

# ಕನ್ನಡ ಬಳಕೆ ಆಗದಿದ್ದಲ್ಲಿ ಉಳಿಕೆಯೂ ಆಗದು

■ ವಿಜಯಸಾಕ್ಷಿ ಸುದ್ದಿ, ಗದಗ



ಕನ್ನಡ ಭಾಷೆಯನ್ನು ಉಳಿಸುವುದು, ಬೆಳೆಸುವುದಕ್ಕಿಂತ ಬಳಸುವದು ಮುಖ್ಯ. ಕನ್ನಡ ಬಳಕೆ ಆಗದಿದ್ದಲ್ಲಿ ಉಳಿಕೆ ಆಗದು ಎಂದು ಮಣಕವಾಡದ ಪೂಜ್ಯ ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಅವರು ಗದುಗಿನ ನಾಲ್ವಾಡ ಓಣಿಯಲ್ಲಿ ಹೆಲ್ಪಿಂಗ್ ಹ್ಯಾಂಡ್ಸ್ ಫೌಂಡೇಶನ್, ಅಪ್ಪುರಾಜ ಇವೆಂಟ್ಸ್ ವತಿಯಿಂದ ಕರ್ನಾಟಕ ರಾಜ್ಯೋತ್ಸವದ ಸುವರ್ಣ ಸಂಭ್ರಮ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಕನ್ನಡ ಉಳಿಸುವ, ಬೆಳೆಸುವ ಚರ್ಚೆ, ಭಾಷಣ ಇಂದು ಬೇಡವಾಗಿದೆ. ಕನ್ನಡ ಬಳಕೆ ಮಾಡುವ ಕೆಲಸ ಕಟ್ಟುನಿಟ್ಟಾಗಿ ಆಗಬೇಕಿದೆ. ಸರಕಾರ ಕನ್ನಡವನ್ನು ಕಡ್ಡಾಯಗೊಳಿಸಿದರೂ ವಾಸ್ತವಿಕವಾಗಿ ಕಟ್ಟುನಿಟ್ಟಾಗಿ ಜಾರಿಗೊಳ್ಳದಿರುವದು, ಕನ್ನಡಿಗರು ಅನುಷ್ಠಾನಗೊಳಿಸದಿರುವದು ವಿಷಾದನೀಯ. ಕನ್ನಡಕ್ಕಾಗಿ, ಏಕೀಕರಣಕ್ಕಾಗಿ ಹೋರಾಟ ನಡೆಸಿದ ಮಹನೀಯರಿಗೆ ಅಗೌರವ ಸಲ್ಲಿಸಿದಂತೆ ಎಂದರು.

ಸುವರ್ಣ ಕರ್ನಾಟಕದ ಸಂಭ್ರಮ ಆಚರಣೆಯ ಈ ಸಂದರ್ಭದಲ್ಲಿ ಐತಿಹಾಸಿಕ ವೇದಿಕೆ ನಿರ್ಮಿಸಿ, ಐತಿಹಾಸಿಕ ಕಾರ್ಯಕ್ರಮ ಮಾಡಿದ್ದು ಅಭಿನಂದನೀಯ. ಅಪ್ಪುರಾಜ ಭದ್ರಕಾಳಮ್ಮನಮಠ ಅವರು ಒಳಗೊಂಡಂತೆ ಸಂಘಟನೆಯ ಎಲ್ಲ ಪದಾಧಿಕಾರಿಗಳ, ಕಾರ್ಯಕರ್ತರ ಶ್ರಮ ಇಲ್ಲಿ ಸಾರ್ಥಕತೆ ಪಡೆದುಕೊಂಡಿದೆ ಎಂದ ಸ್ವಾಮೀಜಿ, ತಂದೆ-ತಾಯಿಯನ್ನು ಗೌರವಿಸಿದರೆ ಮಾತ್ರ ನಿಮ್ಮ ಗೌರವ ಹೆಚ್ಚಾಗುವದು, ಬದುಕು ಬಂಗಾರವಾಗುವದು ಎಂದರು.

ಕನ್ನಡಾಭಿಮಾನಿ ಶಿವಕುಮಾರ ಹಿರೇಮಠ ಮಾತನಾಡಿ, ಸರಕಾರಿ ಅಧಿಕಾರಿಗಳು, ಉಪನ್ಯಾಸಕರು, ಶಿಕ್ಷಕರು ನಿವೃತ್ತಿಯ ನಂತರ ತಮ್ಮ ಅಧಿಕಾರದ ಪ್ರಭಾವ, ಸಂಪರ್ಕವನ್ನು ಬಳಕೆ ಮಾಡಿಕೊಂಡು ಕಲರ್‌ಫುಲ್ ಕಟ್ಟಡ ಕಟ್ಟಿ, ಖಾಸಗಿ ಶಾಲೆಗಳನ್ನು ತೆರೆಯದಂತೆ ತಡೆಯಲು ಕನ್ನಡಪರ ಸಂಘಟನೆಗಳು ಮುಂದಾಗಬೇಕು. ಇಲ್ಲವಾದಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತಿರುವ ಪ್ರಮಾಣ ಇನ್ನಷ್ಟು ಹೆಚ್ಚಾಗುವದು ಎಂದರು.

ಅತಿಥಿಗಳಾಗಿ ಗಣ್ಯರಾದ ಡಾ.ವೀರೇಶ ಹಂಚಿನಾಳ, ಡಾ. ವ್ಹಿ.ಸಿ. ಕಲ್ಮಠ, ರಾಜು ಕುರಡಗಿ, ಗುರುರಾಜ ಹಲಗೇರಿ, ಸದಾಶಿವ ಮದರಿಮಠ, ಬಸವರಾಜ ತಿರ್ಲಾಪೂರ, ರಾಜು ಗುಡಿಮನಿ, ಎಸ್.ಎಚ್. ಮನ್ನೂರ, ರಾಜಣ್ಣ ಕುಂಬಿ, ಅವಿನಾಶ ಜೈನ್, ಅನಂತ ಕಾರ್ಕಳ, ವಿಜಯಕುಮಾರ ಹಿರೇಮಠ, ಪರಶುರಾಮ ಖಟವಟೆ, ನಾಗರಾಜ ತಳವಾರ, ಪ್ರಶಾಂತ ನಾಯ್ಕರ್, ಮಂಜುನಾಥ ಚನ್ನಪ್ಪನವರ ಆಗಮಿಸಿದ್ದರು.

ವೇದಿಕೆಯ ಮೇಲೆ ಶಿವಯ್ಯ ಭದ್ರಕಾಳಮ್ಮನಮಠ, ವೀರಪ್ಪ ಲಕ್ಕುಂಡಿ, ವ್ಹಿ.ಕೆ. ಮಟ್ಟಿ, ಮುರಿಗೆಪ್ಪ ನಾಲವಾಡ, ರಾಜಣ್ಣ ಕಂಪಗೌಡ್ರ, ಪ್ರಕಾಶ ವೈಲಾಯ್, ವಿನಾಯಕ ಚನ್ನವೀರಶೆಟ್ಟರ, ಪ್ರವೀಣ ಗುಳೇದಗುಡ್ಡ, ಉಮೇಶ ದೇವಾಡಿಗ, ಸಿದ್ಧಪ್ಪ ಹರ್ತಿ, ಸಿದ್ಧಲಿಂಗೇಶ ಚನ್ನವೀರಶೆಟ್ಟರ, ಪ್ರಶಾಂತ ಕಪ್ಪತ್ತನವರ ಉಪಸ್ಥಿತರಿದ್ದರು.

ಅಧ್ಯಕ್ಷತೆಯನ್ನು ಹೆಲ್ಪಿಂಗ್ ಹ್ಯಾಂಡ್ಸ್ ಫೌಂಡೇಶನ್ ಅಧ್ಯಕ್ಷ ಅಪ್ಪುರಾಜ ಭದ್ರಕಾಳಮ್ಮನಮಠ ವಹಿಸಿದ್ದರು. ಶಿವಯೋಗಿ ಟೆಂಗಿನಕಾಯಿ ಪ್ರಾರ್ಥಿಸಿದರು, ಬಸವರಾಜ ಜಿನಗಾ ಸ್ವಾಗತಿಸಿದರು, ರಾಜು ಹುಳ್ಳಿಗೌಡ್ರ ಪರಿಚಯಿಸಿದರು. ಪ್ರಶಾಂತ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಬಾಹುಬಲಿ ಜೈನರ್ ನಿರೂಪಿಸಿದರು. ಹರೀಶ ಕಮ್ಮಾರ ವಂದಿಸಿದರು.

> ಭಾರತ ಸ್ವಾತಂತ್ರ್ಯಗೊಳ್ಳುವ ಮುನ್ನವೇ ಕರ್ನಾಟಕ ಏಕೀಕರಣ ಆಗಬೇಕು, ಮೈಸೂರು ರಾಜ್ಯ ಕರ್ನಾಟಕ ರಾಜ್ಯವಾಗಬೇಕೆಂಬ ಕೂಗು ಸಾಕಾರಗೊಂಡರೂ ಕನ್ನಡಿಗರ ಸ್ವಾಭಿಮಾನ ಸಾಕಾಗದು. ಕನ್ನಡ ಬಳಕೆಯಿಂದ ಮಾತ್ರ ಕನ್ನಡ ಉಳಿಯಲು ಸಾಧ್ಯ. ಕನ್ನಡಿಗರ ಮನೆಯ ಕಿಟಕಿ ಇಂಗ್ಲೀಷ್ ಆಗಿದ್ದರೂ ಮನೆಯ ಹೆಬ್ಬಾಗಿಲು ಕನ್ನಡವಾಗಬೇಕು. ಜ್ಞಾನಾರ್ಜನೆಗೆ, ಶಿಕ್ಷಣ ಕಲಿಕೆಗೆ ಇತರೆ ಭಾಷೆಗಳು ಬೇಕು. ಆದರೆ ಕನ್ನಡಕ್ಕೆ ಮೊದಲ ಆದ್ಯತೆ ಇರಲಿ ಎಂದು ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳು ನುಡಿದರು.

# ಮನೋರಮಾ ಕಾಲೇಜ್ ಬಿಸಿಎ 6ನೇ ಸೆಮಿಸ್ಟರ್ ಪರೀಕ್ಷೆ ಫಲಿತಾಂಶ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದ ಶೈಕ್ಷಣಿಕ ಸಾಲಿನ ಬಿಸಿಎ ಕೋರ್ಸಿನ 6ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ದಿವ್ಯಾ ವರ್ಣೇಕರ, ವಿಜಯಲಕ್ಷ್ಮೀ ಇನಾಮತಿ 477 ಅಂಕ ಪಡೆದು ಪ್ರಥಮ ಸ್ಥಾನ, ರಾಧಾ 449 ಅಂಕ ಪಡೆದು ದ್ವಿತೀಯ ಸ್ಥಾನ, ವನಿತಾ ಕೆಂಚರೆಡ್ಡರ 448 ಅಂಕ ಪಡೆದು ತೃತೀಯ ಸ್ಥಾನ, ಶ್ರೀವತ್ಸ 447 ಅಂಕಗಳೊಂದಿಗೆ ನಾಲ್ಕನೇ ಸ್ಥಾನ, ಪಡೆದಿದ್ದಾರೆ. ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳ ಸಾಧನೆಯನ್ನು ಸಂಸ್ಥೆಯ ಚೇರಮನ್ ಎನ್.ಎಮ್. ಕುಡತರಕರ, ಪ್ರಾಚಾರ್ಯ ಬಿ.ಎಸ್. ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ಸವಿತಾ ಪೂಜಾರ ಹಾಗೂ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

# ಪುರಸಭೆಗೆ ಮೂಲಭೂತ ಸೌಕರ್ಯ ಕಲ್ಪಿಸಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪೌರಾಡಳಿತ ಇಲಾಖೆ ಸಚಿವ ರಹೀಂಖಾನ್ ಅವರು ಲಕ್ಷ್ಮೇಶ್ವರಕ್ಕೆ ಆಗಮಿಸಿದ ವೇಳೆ ಕರವೇ ತಾಲೂಕಾ ಘಟಕದ ಪದಾಧಿಕಾರಿಗಳು ಪಟ್ಟಣದ ಅಭಿವೃದ್ಧಿಗಾಗಿ ಮನವಿ ಸಲ್ಲಿಸಿದರು.

ಗದಗ ಜಿಲ್ಲೆಯಲ್ಲಿಯೇ ದೊಡ್ಡದಾದ ಲಕ್ಷ್ಮೇಶ್ವರ ಪಟ್ಟಣ ಶೈಕ್ಷಣಿಕ, ವಾಣಿಜ್ಯ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದುತ್ತಿದೆ. 50 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಪಟ್ಟಣದಲ್ಲಿ ರಸ್ತೆ, ಚರಂಡಿ ಸರಿಯಿಲ್ಲ. ಕುಡಿಯುವ ನೀರಂತೂ 15 ದಿನಗಳಿಗೊಮ್ಮೆ ಬರುತ್ತದೆ. ಕಳೆದ ಐದಾರು ವರ್ಷಗಳ ಹಿಂದೆ 40 ಕೋಟಿ ರೂ ವೆಚ್ಚದಲ್ಲಿ ಕೈಗೊಂಡ ಒಳಚರಂಡಿ ಕಾಮಗಾರಿ ಹಳ್ಳ ಹಿಡಿದಿದೆ. ಮುಖ್ಯವಾಗಿ ಕುಡಿಯುವ ನೀರಿನ ಹೊಸ ಪೈಪ್‌ಲೈನ್ ಆಗಬೇಕು. ಪಟ್ಟಣದ ನಾಗರಿಕರು ಇಲ್ಲಿನ ಸಮಸ್ಯೆಗಳಿಂದ ರೋಸಿ ಹೋಗಿದ್ದಾರೆ. ಅಭಿವೃದ್ಧಿ ಮರೀಚಿಕೆಯಾಗಿದೆ. ಈ ನಿಟ್ಟಿನಲ್ಲಿ ಲಕ್ಷ್ಮೇಶ್ವರ ಪುರಸಭೆಗೆ ಮೂಲಭೂತ ಸೌಕರ್ಯ ಕಲ್ಪಿಸಲು ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಒದಗಿಸಿ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಈ ಬಗ್ಗೆ ಸ್ಥಳೀಯ ಶಾಸಕರು, ಪುರಸಭೆಯ ಅಧಿಕಾರಿಗಳೊಂದಿಗೆ ಮಾತನಾಡುತ್ತೇನೆ. ಜನಪ್ರತಿನಿಧಿಗಳು, ಅಧಿಕಾರಿಗಳು ಸಮಗ್ರ ಮಾಹಿತಿಯೊಂದಿಗೆ ಅವರನ್ನು ಸಂಪರ್ಕಿಸಲು ತಿಳಿಸಿದರು. ಈ ವೇಳೆ ಕರವೇ ತಾಲೂಕಾ ಪ್ರ. ಕಾರ್ಯದರ್ಶಿ ಪ್ರಕಾಶ ಕೊಂಚಿಗೇರಿಮಠ, ಮೈನುದ್ದಿನ ಮನಿಯಾರ್, ಬಸವರಾಜ ಮಡಿವಾಳರ, ಆಶಿಫ್ ಎಲಿವಾಳ, ಕೈಸರ್ ಮಹಮ್ಮದಲಿ, ಹನಮಂತಪ್ಪ ದತ್ತರಗಿ, ಅಖಿಲ್ ಗೋಸಾವಿ, ಗಣೇಶ ಮೆಹರವಾಡೆ ಮುಂತಾದವರಿದ್ದರು.

# ಈರುಳ್ಳಿ ಬೆಳೆಗಾರರಿಗೆ ನೆರವು ನೀಡಿ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಮಳೆ ಕೊರತೆಯಿಂದಾಗಿ ಈರುಳ್ಳಿ ಹಾಗೂ ಮೆಣಸಿನಕಾಯಿ ಬೆಳೆಗಾರರು ತೀವ್ರ ಕಂಗಾಲಾಗಿದ್ದಾರೆ. ಬೆಳೆಗಳು ಒಣಗುತ್ತಿದ್ದು ಪರಿಹಾರಕ್ಕಾಗಿ ಅಂಗಲಾಚುವ ಸ್ಥಿತಿಗೆ ತಲುಪಿದ್ದಾರೆ.

ಗದಗ ಜಿಲ್ಲೆಯಲ್ಲಿ ಅತ್ಯಂತ ಮಹತ್ವ ಹೊಂದಿರುವ ಈರುಳ್ಳಿ, ಮೆಣಸಿನಕಾಯಿ ಬೆಳೆಗಳಿಗೆ ಈ ವರ್ಷದ ಅನಾವೃಷ್ಟಿಯಿಂದ ತೀವ್ರ ನಷ್ಟ ಉಂಟಾಗಿದೆ.

ಆರ್ಥಿಕ ಸಂಕಷ್ಟದಲ್ಲಿಯೂ ಬಿತ್ತನೆ ಮಾಡಿದ ರೈತನಿಗೆ, ಮಳೆ ಬಾರದೆ ಈರುಳ್ಳಿ ಹಾಗೂ ಮೆಣಸಿನಕಾಯಿ ಬೆಳೆ ಕುಸಿತ ಕಂಡು ನಷ್ಟ ಅನುಭವಿಸುವಂತಾಗಿದ್ದು, ದರವಿದ್ದರೂ ಬೆಳೆಯೇ ಇಲ್ಲ ಎಂಬಂತಾಗಿದೆ.

ಕಳೆದ ವರ್ಷ ಹೆಚ್ಚಿನ ಮಳೆಯಾಗಿ ಬೆಳೆಗಳು ಹಾನಿಗೊಳಗಾಗಿತ್ತು. ಈ ವರ್ಷವೂ ಸಹ ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಬೆಳೆಗಳು ಕಮರಿ ಹೋಗಿದ್ದು ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ.

ಬೆಳೆ ನಷ್ಟದ ಪರಿಹಾರ ಹಾಗೂ ಬೆಳೆ ವಿಮೆ ಹಣವನ್ನು ಜಿಲ್ಲಾಧಿಕಾರಿಗಳು ಶೀಘ್ರವಾಗಿ ರೈತರ ಬ್ಯಾಂಕ್ ಖಾತೆಗೆ ಜಮಾ ಮಾಡಲೇಬೇಕು ಎಂದು ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್.ಬಾಬರಿ ಆಗ್ರಹಿಸಿದ್ದಾರೆ.



# ಅಸಮರ್ಪಕ ನೀರು ಪೂರೈಕೆ: ಪುರಸಭೆಯ ವಿರುದ್ಧ ಆಕ್ರೋಶ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ವಾರ್ಡ್ ನಂ-23ರ ಮಂಜಲಾಪುರ ಪ್ಲಾಟ್, ಅಂಕುಶ್‌ಖಾನ ನಗರದ ನಿವಾಸಿಗಳು ಸಮರ್ಪಕ ಕುಡಿಯುವ ನೀರಿಗಾಗಿ ಖಾಲಿ ಕೊಡ ಹಿಡಿದು ಭಾನುವಾರ ಪುರಸಭೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ನಿವಾಸಿ ಇಮಾಹುಸೇನ್ ಅಂಕುಶಖಾನ್, ವಾರ್ಡ್‌ನ ನಿವಾಸಿಗಳು ತಪ್ಪದೇ ತೆರಿಗೆ ಕಟ್ಟುತ್ತಿದ್ದರೂ ಕುಡಿಯುವ ನೀರು, ಚರಂಡಿ, ಬೀದಿದೀಪ, ಸ್ವಚ್ಛತೆ ಸೇರಿ ಅನೇಕ ಜೀವನಾಗತ್ಯ ಸೌಲಭ್ಯಗಳಿಲ್ಲದೇ ಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದೇವೆ. ಈ ಪ್ರದೇಶದಲ್ಲಿ ಜಲಾಗಾರ ನಿರ್ಮಿಸಿ ವರ್ಷಗಳೇ ಕಳೆದಿದ್ದರೂ ನೀರಿನ ವ್ಯವಸ್ಥೆ ಕಲ್ಪಿಸಿಲ್ಲ. ನೀರು ಸರಬರಾಜು ಮಾಡುವ ಪೈಪ್‌ಲೈನ್ ಇಲ್ಲ. ಸಾರ್ವಜನಿಕ ನಲ್ಲಿಯ ವ್ಯವಸ್ಥೆಯೂ ಇಲ್ಲದ್ದರಿಂದ ಜನ ನೀರಿಗಾಗಿ ಪರದಾಡುತ್ತಿದ್ದಾರೆ. ಕೂಡಲೇ ಪೈಪ್‌ಲೈನ್ ಅಳವಡಿಸಿ ನೀರಿನ ವ್ಯವಸ್ಥೆ ಮತ್ತು ಅಗತ್ಯ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿದರು.

ಈ ಕುರಿತು ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಅವರನ್ನು ಸಂಪರ್ಕಿಸಲಾಗಿ, ಇಲ್ಲಿನ ನಿವಾಸಿಗಳಿಗೆ ಸಮರ್ಪಕ ನೀರಿನ ವ್ಯವಸ್ಥೆ ಕಲ್ಪಿಸಲು ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಈಗಾಗಲೇ ನಿರ್ಮಿಸಿರುವ ಜಲಾಗಾರದ ಹತ್ತಿರ ಹೊಸ ಬೋರ್‌ವೆಲ್ ಕೊರೆಯಿಸಲು ಕ್ರಿಯಾಯೋಜನೆ ಮಾಡಲಾಗಿದೆ. ಸಿಡಿ ನಿರ್ಮಾಣ, ಸ್ವಚ್ಛತೆ, ಬೀದಿ ದೀಪ ನಿರ್ವಹಣೆಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು. ನಗರೋತ್ಥಾನ ಯೋಜನೆಯಡಿ ರಸ್ತೆ, ಚರಂಡಿ ನಿರ್ಮಾಣ ಮಾಡಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಇಮಾಮಹುಸೇನ ಸಂಕ್ಲೀಪುರ, ಅಬ್ದುಲ್‌ಹುಸೇನ ಜಮಖಂಡಿ, ಇಸ್ಮಾಯಲ್ ಮಂಜಲಾಪುರ, ಮುಸ್ತಾಕ ದೇಸಳ್ಳಿ, ಮೈನುದ್ದೀನ ಸಂಶಿ, ಇಸ್ಮಾಯಿಲ್ ಕೋಲಕಾರ, ಖಾಜಾ ಗುಡ್ಡದ, ಮಂಜು ಕಲಾಲ, ಡಾ. ನಾಗರಾಜ ಕಳ್ಳಿಮನಿ, ಆಯ್.ಬಿ. ಖಾಜಿ, ಸೈಯದ್ ಆರ್ ಪೀರಜಾಧೆ, ನೂರಮ್ಮದ ನಿಡಗುಂದಿ, ಬಾಷಾಸಾಬ ಹುಣಸಿಕಟ್ಟಿ, ಷಣ್ಮುಕಪ್ಪ ಗೋಡಿ, ಸೋಮಣ್ಣ ಗುಡಗೇರಿ, ಷಣ್ಮುಕಪ್ಪ ಗೋಡಿ, ಮೈನುದ್ದಿನ ಡಾಲಾಯತ, ಕುತ್ಬುದ್ದೀನ ಕಾರಡಗಿ, ಗಂಗಾಧರ ಅಳವಂಡಿ ಸೇರಿ ಹಲವರಿದ್ದರು. ಶಬ್ಬೀರ ಮುಲ್ಲಾನವರ ನಿರೂಪಿಸಿದರು.

# ಜ್ಞಾನ ದೀಪ ಬೆಳಗಲು ಗುರುವಿನ ಪಾತ್ರ ಮುಖ್ಯ

■ ವಿಜಯಸಾಕ್ಷಿ ಸುದ್ದಿ, ಗದಗ



ಗುರುವಿನ ಮಹಿಮೆ ವರ್ಣನೆಗೆ ನಿಲುಕದ್ದು. ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಿ ಜ್ಞಾನದ ದೀಪವನ್ನು ಬೆಳಗಿಸುವಲ್ಲಿ ಗುರುವಿನ ಪಾತ್ರ ಬಹಳ ಮುಖ್ಯವಾಗಿದೆ ಎಂದು ಹರ್ಲಾಪುರ ಕೊಟ್ಟೂರೇಶ್ವರ ಶ್ರೀಮಠದ ಪೂಜ್ಯಶ್ರೀ ಅಭಿನವ ಕೊಟ್ಟೂರೇಶ್ವರ ಶ್ರೀಗಳು ಹೇಳಿದರು.

ಅವರು ಹರ್ಲಾಪುರ ಗ್ರಾಮದ ಹರ್ತಿಮಠದ ಮಹಾ ತಪಸ್ವಿ ಬಸವಾನಂದ ಶಿವಯೋಗಿಗಳ ಶ್ರೀಮಠದಲ್ಲಿ 3ನೇ ವರ್ಷದ ಗುಡ್ಡಾಪುರ ಶ್ರೀ ದಾನಮ್ಮ ದೇವಿ ಪುರಾಣದ ಪ್ರಾರಂಭೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾ.ಪಂ ಅಧ್ಯಕ್ಷೆ ಸುಮಂಗಲಾ ಚಟ್ರಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಗುರುವಿನ ಮುಖಾಂತರ ಪರಮಾತ್ಮನನ್ನು ಕಾಣಬೇಕು. ಗುರು ಸೇವೆಯನ್ನು ಮಾಡುತ್ತಾ ಗುರು ಪುತ್ರರಾಗಬೇಕು ಎಂದು ಹೇಳಿದರು. ಪ್ರವಚನಕಾರರದ ವೇದಮೂರ್ತಿ ಸದಾನಂದಯ್ಯ ಶಾಸ್ತ್ರಿಗಳು ಮಾತನಾಡಿ, ಪುರಾಣ ಪುಣ್ಯಕಥೆಗಳನ್ನು ಕೇಳುವುದರಿಂದ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ನಮ್ಮ ಸಂಸ್ಕೃತಿ, ಸಂಸ್ಕಾರವನ್ನು ಮರೆತು ಮೃಗವಾಗುವುದಕ್ಕಿಂತ ಅರಿತು ಆಚರಿಸಿ, ಮಾನವ ಮಹದೇವನಾಗಬೇಕು. ಅಂದಾಗ ಜೀವನ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಬಸವಾನಂದ ಸಾಂಸ್ಕೃತಿಕ ಸೇವಾ ಸಂಸ್ಥೆಯ ಅಧ್ಯಕ್ಷ ವೇದಮೂರ್ತಿ ಫಕೀರಯ್ಯ ಸ್ವಾಮಿಗಳು ಮಾತನಾಡಿ, ಗುರುವಿನ ಗುಣಗಾನ ಬಹಳ ದೊಡ್ಡದು. ಮನುಷ್ಯ ಎತ್ತರ ಮಟ್ಟಕ್ಕೆ ಬೆಳೆಯಬೇಕಾದರೆ ಮುಂದೆ ಗುರಿ ಇರಬೇಕು, ಹಿಂದೆ ಗುರು ಇರಬೇಕು ಎಂದು ಹೇಳಿದರು.

ರಾಮಣ್ಣ ಬೆಳದಡಿ ಸ್ವಾಗತಿಸಿದರು. ಗೂಳಪ್ಪ ರವದಿ ಕಾರ್ಯಕ್ರಮ ನಿರೂಪಿಸಿದರು. ಕಿಡಿಗ್ಗಣ ಸ್ವಾಮಿಗಳು ಹರ್ತಿಮಠ ವಂದಿಸಿದರು.

## ಪ್ರಧಾನಮಂತ್ರಿಗಳಿಂದ ಕೊಡಮಾಡಿದ ಅಭಿನಂದನಾ ಪತ್ರ ವಿತರಿಸಿದ ಆರ್.ಎಸ್ ಬುರಡಿ

# ಶಾಲೆಯ ಸಿಬ್ಬಂದಿಗಳ ಶ್ರಮ ಸಾರ್ಥಕವಾಗಿದೆ



■ ವಿಜಯಸಾಕ್ಷಿ ಸುದ್ದಿ, ಗದಗ

ಶಹರದ ಸಿದ್ದಲಿಂಗ ನಗರದಲ್ಲಿರುವ ಸರ್ಕಾರಿ ಪ್ರೌಢಶಾಲೆಯನ್ನು ಬಸವರಾಜ ಹೊರಟ್ಟಿ ದಂಪತಿಗಳು ದತ್ತು ಪಡೆದ ಮೇಲೆ ಜಿಲ್ಲೆಯಲ್ಲಿಯೇ ಒಂದು ಮಾದರಿ ಶಾಲೆಯಾಗಿ ರೂಪುಗೊಂಡಿದೆ. ಪ್ರಸ್ತುತ ಪ್ರಧಾನಮಂತ್ರಿಗಳ ನೆಚ್ಚಿನ 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮದಲ್ಲಿ 15 ಜನ ಶಿಕ್ಷಕರು ಹಾಗೂ 51 ವಿದ್ಯಾರ್ಥಿಗಳು ಭಾಗವಹಿಸಿ ಪ್ರಧಾನಮಂತ್ರಿಗಳಿಂದ ಅಭಿನಂದನಾ ಪತ್ರ ಪಡೆದಿದ್ದು ಶಿಕ್ಷಣ ಇಲಾಖೆಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್ ಬುರಡಿ ಹೇಳಿದರು.

ಅವರು ಪ್ರಧಾನಮಂತ್ರಿಗಳ 'ಪರೀಕ್ಷಾಪೇ ಚರ್ಚಾ' ಕಾರ್ಯಕ್ರಮದಲ್ಲಿ ವಿಕಸಿತ ಭಾರತ ಕಟ್ಟುವ ದೃಢ ಸಂಕಲ್ಪ, ಗುಲಾಮಗಿರಿಯ ಮಾನಸಿಕತೆಯಿಂದ ಮುಕ್ತಿ, ನಮ್ಮ ಪರಂಪರೆಯ ಬಗ್ಗೆ ಹೆಮ್ಮೆ, ಒಗ್ಗಟ್ಟಿನ ಬಲವರ್ಧನೆ, ಕರ್ತವ್ಯಗಳತ್ತ ಗಮನ ಮುಂತಾದ ವಿಷಯಗಳ ಕುರಿತು ಪ್ರಧಾನಮಂತ್ರಿಗಳೊಂದಿಗೆ ಚರ್ಚಿಸಿ ಮೆಚ್ಚುಗೆಗೆ ಪಾತ್ರರಾದ ಶಾಲಾ ಮುಖ್ಯೋಪಾಧ್ಯಾಯೆ ಪಾರ್ವತಿ ವಸ್ತ್ರದ, ಶಿಕ್ಷಕ ವೃಂದದ ಜಯಲಕ್ಷ್ಮೀ ಬಿ.ಅಣ್ಣಿಗೇರಿ, ಎಸ್. ಆರ್. ಹನಮಗೌಡ್ರ, ಎಸ್.ಜಿ. ಕುಲಗುಡಿ, ಎಮ್.ಆಯ್. ಶಿವನಗೌಡ್ರ, ಎಂ.ಪಿ. ಸಾಂಬ್ರಾಣಿ, ಎಸ್.ಬಿ. ಗುಳೇದವರ, ಎಸ್.ಎಂ. ಪತ್ತಾರ, ಎಸ್.ಎಸ್. ಗಾಳಿ, ಆರ್.ವಾಯ್. ಬಸರಿ, ಎಸ್.ಎ. ಬಾಣದ, ಎಸ್.ಎ. ಗದ್ದನಕೇರಿ, ಎಸ್.ಯು. ಕುಷ್ಟಗಿ, ಜಿ.ಎನ್. ಅಳವಂಡಿ ಸೇರಿದಂತೆ 51 ವಿದ್ಯಾರ್ಥಿಗಳಿಗೆ ಪ್ರಧಾನಮಂತ್ರಿಗಳಿಂದ ಕೊಡಮಾಡಿದ ಅಭಿನಂದನಾ ಪತ್ರ ವಿತರಿಸಿ ಮಾತನಾಡಿದರು.

1993ರಿಂದ ಆರಂಭವಾದ ಈ ಶಾಲೆ ಬಸವರಾಜ ಹೊರಟ್ಟಿ ದಂಪತಿಗಳು ದತ್ತು ಪಡೆದ ಮೇಲೆ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಎಲ್ಲ ಮೂಲಭೂತ ಸೌಕರ್ಯಗಳನ್ನು ಹೊಂದುವುದರ ಜೊತೆಗೆ ಸಾಕಷ್ಟು ಕಳೆಗಟ್ಟಿದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಇಲ್ಲಿ ಸಾಕಷ್ಟು ಪ್ರತಿಭಾವಂತ ಶಿಕ್ಷಕ ಸಮೂಹ ಇದೆ. ಯಾವುದೇ ಪ್ರಚಾರ ಬಯಸದೇ ತಾವಾಯಿತು, ತಮ್ಮ ಕೆಲಸವಾಯಿತು ಎಂಬಂತಿರುವ ಈ ಸಿಬ್ಬಂದಿಯ ಶ್ರಮ ಸಾರ್ಥಕವಾಗಿದೆ. ಇವರೆಲ್ಲರಿಗೂ ಶಿಕ್ಷಣ ಇಲಾಖೆಯ ಪರವಾಗಿ ಅಭಿನಂದಿಸುವುದಾಗಿ ಹೇಳಿದರು.

> ಕಳೆದ 30 ವರ್ಷಗಳಿಂದ ಅತ್ಯುತ್ತಮ ಫಲಿತಾಂಶವನ್ನು ನೀಡುತ್ತಾ ಬಂದಿರುವ ಈ ಶಾಲೆ ಜಿಲ್ಲೆಯಲ್ಲಿಯೇ ಒಂದು ಮಾದರಿ ಶಾಲೆಯಾಗಿರುವುದು ನಮಗೆಲ್ಲ ಒಂದು ಹೆಮ್ಮೆ. ಸಮಾಜದ ಆಸ್ತಿಯಾಗಿ ಮಕ್ಕಳ ಭವಿಷ್ಯಕ್ಕಾಗಿ ಇಲ್ಲಿಯ ಶಿಕ್ಷಕ ಸಮೂಹ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಶಿಕ್ಷಣ ಇಲಾಖೆ, ಸಮಾಜ ಇವರ ಸೇವೆಯನ್ನು ಎಂದೂ ಮರೆಯದು ಎಂದು ಬುರಡಿಯವರು ಹೇಳಿದರು.

# ಮಹಮ್ಮದ ಸಾಕೀಬ್‌ಗೆ ಕರಾಟೆಯಲ್ಲಿ ಚಿನ್ನದ ಪದಕ

■ ವಿಜಯಸಾಕ್ಷಿ ಸುದ್ದಿ, ಗದಗ



ಸಿಐಎಸ್‌ಸಿ ಅಂತರರಾಜ್ಯ ರೀಜನಲ್ ಕರಾಟೆ ಪಂದ್ಯಾವಳಿ ವೆಸ್ಟ್‌ಬೆಂಗಲ್ (ಕಲ್ಕತ್ತಾ) ಹೌರಾದ ಡಿವೈನ್ ಮರ್ಸಿ ಸ್ಕೂಲ್ ಸಿಐಎಸ್‌ಸಿಇ (ನ್ಯೂ ದೆಹಲಿ)ದಲ್ಲಿ ಇತ್ತೀಚೆಗೆ ನಡೆಯಿತು.

ಈ ಪಂದ್ಯಾವಳಿಯ ಮೊದಲನೇ ದಿನ ಗದುಗಿನ ಮುಷ್ಠಿ ಕರಾಟೆ ಫೌಂಡೇಶನ್ ವಿದ್ಯಾರ್ಥಿಯಾದ ಸಿಐಎಸ್‌ಸಿ ವಿನಯ್ ಚಿಕ್ಕಟ್ಟಿ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಮಹಮ್ಮದ್ ಸಾಕೀಬ್ 14 ವರ್ಷದ ವಿಭಾಗದಲ್ಲಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದಾನೆ.

ವಿದ್ಯಾರ್ಥಿಯ ಸಾಧನೆಗೆ ಗದಗ-ಬೆಟಗೇರಿ ನಗರಸಭೆ ಸದಸ್ಯರಾದ ಮುತ್ತು ಮುಶಿಗೇರಿ, ಶಬ್ಬೀರ ರೋಣದ, ಅಧ್ಯಕ್ಷರಾದ ವರಲಕ್ಷ್ಮೀ ಹೊಂಬಾಳಿ, ಕರಾಟೆ ಕೋಚ್ ಬಸವರಾಜ್ ಹೊಂಬಾಳಿ ಹಾಗೂ ಮುಷ್ಠಿ ಕರಾಟೆ ಫೌಂಡೇಶನ್‌ನ ಸರ್ವ ಸದಸ್ಯರು ಹಾಗೂ ಪಾಲಕರು ಅಭಿನಂದನೆ ಸಲ್ಲಿಸಿದ್ದಾರೆ.

## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

## ದೀಪಾವಳಿ ಹಬ್ಬಕ್ಕೆ ವಾಯುವ್ಯ ಸಾರಿಗೆ ಸಂಸ್ಥೆಯಿಂದ 500ಕ್ಕೂ ಹೆಚ್ಚು ವಿಶೇಷ ಬಸ್ ವ್ಯವಸ್ಥೆ

▸▸ಮೊದಲನೇ ಪುಟದಿಂದ

ಕೌಂಟರ್ ಗಳಲ್ಲಿ ಮುಂಗಡ ಟಿಕೆಟ್ ಬುಕ್ಕಿಂಗ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ನಾಲ್ಕು ಅಥವಾ ಹೆಚ್ಚು ಆಸನಗಳನ್ನು ಒಂದೇ ಟಿಕೆಟ್ ನಲ್ಲಿ ಕಾಯ್ದಿರಿಸಿದರೆ ಪ್ರಯಾಣದರದಲ್ಲಿ ಶೇಕಡ 5ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಹೋಗುವ ಹಾಗೂ ಬರುವ ಪ್ರಯಾಣಕ್ಕೆ ಒಂದೇ ಟಿಕೆಟ್ ಪಡೆದರೆ ಹಿಂದಿರುಗುವ ಪ್ರಯಾಣ ದರದಲ್ಲಿ ಶೇಕಡ 10ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಕೊನೆಯ ಕ್ಷಣದ ರಷ್ ನಿಂದ ತಪ್ಪಿಸಿಕೊಳ್ಳಲು ಕೂಡಲೇ ಮುಂಗಡ ಬುಕ್ಕಿಂಗ್ ಮಾಡಿಕೊಳ್ಳುವುದು ಸೂಕ್ತ ಎಂದು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಮೈಮರೆಸಿದ ಟಗರಿನ ಕಾಳಗ

▸▸ಮೊದಲನೇ ಪುಟದಿಂದ

ಕಣದೊಳಗೆ ಬಾರದಂತೆ ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು.

ಜಿಲ್ಲೆಯಲ್ಲಿ ಟಗರು ಕಾಳಗದ ಸ್ಪರ್ಧೆ ನಡೆಯುವುದು ಸಾಮಾನ್ಯವಾಗಿದ್ದು, ಮಾಲೀಕರು ಪ್ರತಿ ದಿನ ತರಬೇತಿ ಕೊಡುತ್ತಾರೆ. ಹೀಗೆ ನಿರಂತರ ಪರಿಶ್ರಮವಹಿಸುವ ಟಗರುಗಳು ಮೈದಾನದಲ್ಲಿ ಪರಸ್ಪರ ಗೆಲುವಿಗೆ ಹೋರಾಡುತ್ತವೆ. ಅಲ್ಲದೇ ಕಾಳಗದಲ್ಲಿ ಮಾಲೀಕನ ಆಜ್ಞೆಯಂತೆ ಶಕ್ತಿ ಪ್ರದರ್ಶನ ಮಾಡುತ್ತವೆ.

ಟಗರು ಕಾಳಗ ಕಣ್ತುಂಬಿಕೊಳ್ಳಲು ಮೈದಾದತ್ತ ಜನಸಾಗರವೇ ಹರಿದು ಬಂದಿತ್ತು. ನಿರಂತರ ಅಭ್ಯಾಸ ಹಾಗೂ ಕಾಳಗಕ್ಕಾಗಿ ಸಜ್ಜಾದ ಟಗರುಗಳು ಸ್ಪರ್ಧೆಯಲ್ಲಿ ಭಾರಿ ಪೈಪೋಟಿ ನಡೆಸಿದ್ದವು. ಜಿಲ್ಲೆ ಸೇರಿ ನೆರೆಯ ಜಿಲ್ಲಾ ಕೇಂದ್ರಗಳಿಂದ 100ಕ್ಕೂ ಹೆಚ್ಚು ಟಗರುಗಳು ಭಾಗವಹಿಸಿ ತಮ್ಮ ತಾಕತ್ತು ಪ್ರದರ್ಶಿಸಿದವು. ಆರು ಮತ್ತು ಎಂಟು ಹಲ್ಲಿನ ಟಗರುಗಳ ಕಾಳಗದ ಆಟ ಜೋರಾಗಿತ್ತು. ಒಟ್ಟು ನಾಲ್ಕು ವಿಭಾಗದಲ್ಲಿ ಗೆದ್ದ ಟಗರುಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನದೊಂದಿಗೆ ಆಕರ್ಷಕ ಟ್ರೋಫಿ ನೀಡಲಾಗುತ್ತಿದೆ. ಆರು ಮತ್ತು ಎಂಟು ಹಲ್ಲಿನ ಟಗರುಗಳಿಗೆ ಮೊದಲ ಬಹುಮಾನವಾಗಿ 10,001 ರೂಪಾಯಿ ನೀಡಲಾಗುವುದು ಎಂದು ಆಯೋಜಕರು ತಿಳಿಸಿದರು.

### ಗುಡುಗು-ಸಿಡಿಲು ಸಮೇತ ದಿಢೀರ್ ಪ್ರತ್ಯಕ್ಷನಾದ ಮಳೆರಾಯ | ಪಟ್ಟಣದಲ್ಲಿ ಭಾರೀ ಅವಾಂತರ

# ವೀರಭದ್ರೇಶ್ವರ ಸನ್ನಿಧಿಯಲ್ಲಿ ಜಲ ದಿಗ್ಬಂಧನ



* ಸಣ್ಣ ಸಾಧು ಅಜ್ಜನ ಮಠದ ಬಳಿ ಮನೆ ಕುಸಿತ.
* ಆದಿ ದೇವ ವೀರಭದ್ರೇಶ್ವರ ಸನ್ನಿಧಾನದಲ್ಲಿ ಜಲ ದಿಗ್ಬಂದನ.
* ನೀರು ಪಾಲಾದ ಬಿದಿ ಬದಿಯ ತರಕಾರಿ, ಅಂಗಡಿಗಳಿಗೆ ನುಗ್ಗಿದ ನೀರು.
* ರಸ್ತೆ ಮೇಲೆ ನುಗ್ಗಿದ ಚರಂಡಿ ನೀರು, ಪುರಸಭೆಯ ವಿರುದ್ಧ ಸಾರ್ವಜನಿಕರ ಹಿಡಿಶಾಪ.
* ಭಾರಿ ಮಳೆಗೆ ರಸ್ತೆಯಲ್ಲಿ ನಿಂತ 108 ಅಂಬ್ಯುಲೆನ್ಸ್ ಸೇರಿದಂತೆ ಇತರೆ ವಾಹನಗಳು.





■ವಿಜಯಸಾಕ್ಷಿ ಸುದ್ದಿ, ರೋಣ

ಇನ್ನೇನು ಈ ವರ್ಷದ ಮಳೆಗಾಲ ಮುಗಿದೇಹೋಯ್ತು, ಇನ್ನೇನಿದ್ದರೂ ನೀರಿಗಾಗಿ ರೈತರು, ಸಾರ್ವಜನಿಕರು ಪರದಾಡುವ ಕಾಲ ಹತ್ತಿರವಾಯ್ತು ಎಂದುಕೊಳ್ಳುವಷ್ಟರಲ್ಲಿಯೇ ಮಳೆರಾಯ ದಿಢೀರ್ ಪ್ರತ್ಯಕ್ಷನಾಗಿ ತಂಪೆರೆದಿದ್ದಾನೆ. ಸೋಮವಾರ ಗುಡುಗು-ಸಿಡಿಲು ಸಮೇತ ಧೀಡಿರ್ ಪ್ರತ್ಯಕ್ಷನಾದ ವರುಣದೇವ ಪಟ್ಟಣದಾದ್ಯಂತ ಹಲವಾರು ರಿತಿಯ ಅವಾಂತರಗಳನ್ನೂ ಸೃಷ್ಟಿಸಿದ್ದಾನೆ.

ಸೋಮವಾರ ಮದ್ಯಾಹ್ನ 3 ಗಂಟೆಯ ಸುಮಾರಿಗೆ ಪ್ರಾರಂಭವಾದ ಮಳೆ 1 ಗಂಟೆಗೂ ಹೆಚ್ಚಿನ ಸಮಯ ಅರ್ಭಟಿಸಿತು. ಈ ಅನಿರೀಕ್ಷಿತ ಮಳೆಗೆ ನಾಗರಿಕ ಚಟುವಟಿಕೆಗಳೂ ಸೇರಿದಂತೆ ವ್ಯಾಪಾರ ವಹಿವಾಟುಗಳು ಸಹ ನಿಶ್ಯಬ್ಧಗೊಂಡವು. ಭಾರೀ ಮಳೆಯಿಂದ ರೈತರ ಮೊಗದಲ್ಲಿ ಹರ್ಷ ಮೂಡಿಸಿತು.

ರಭಸದಿಂದ ಸುರಿದ ಭಾರೀ ಮಳೆಗೆ ರೋಣ ಪಟ್ಟಣ ತತ್ತರಿಸಿತ್ತು. ಕೆಲವಡೆ ಮನೆಗಳಿಗೆ ನೀರು ನುಗ್ಗಿ ಅವಾಂತರವನ್ನು ಸೃಷ್ಟಿಸಿದರೆ, ಸಣ್ಣ ಸಾದು ಅಜ್ಜನ ಮಠದ ಬಳಿ ಮನೆ ಕುಸಿದು ಬಿದ್ದಿದೆ. ಅಲ್ಲದೆ ಕೆನರಾ ಬ್ಯಾಂಕ್ ಬಳಿಯಿರುವ ಅಂಗಡಿಗಳಿಗೆ ಚರಂಡಿ ನೀರು ನುಗ್ಗಿ ಹಾನಿ ಉಂಟು ಮಾಡಿತು. ರಸ್ತೆ ಬದಿಯಲ್ಲಿ ಮಾರಾಟ ಮಾಡಲಾಗುತ್ತಿದ್ದ ತರಕಾರಿಗಳು ನೀರು ಪಾಲಾಗುವಂತಾಗಿ ಹಾನಿ ಮಾಡಿತು. ರೋಣ ಪಟ್ಟಣದ ಸೂಡಿ ಕ್ರಾಸ್‌ನಿಂದ ಪೋತರಾಜನ ಕಟ್ಟೆಯವರೆಗೆ ಹೊಳೆಯಂತೆ ಹರಿದ ನೀರು ಪಟ್ಟಣದ ಆರಾಧ್ಯ ದೇವ ವೀರಭದ್ರೇಶ್ವರನ ಸನ್ನಿಧಿಯಲ್ಲಿ ಜಲ ದಿಗ್ಬಂಧನ ಸೃಷ್ಟಿಸಿತ್ತು. ರಸ್ತೆಯೂ ಕಾಣದಷ್ಟು ಜೋರಾಗಿ ಸುರಿದ ಮಳೆಯಿಂದ ಬಸ್ ಸೇರಿದಂತೆ ಇತರೆ ವಾಹನಗಳು ಮುಖ್ಯ ರಸ್ತೆಯಲ್ಲಿ ಸಾಲಿನಲ್ಲಿ ನಿಲ್ಲುವಂತಾಗಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪರದಾಡುವಂತಾಯಿತು.

## ಸಂತೋಷ ಪವಾರರಿಗೆ 'ಹೆಮ್ಮೆಯ ಕನ್ನಡಿಗ' ಪ್ರಶಸ್ತಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

'ನಮ್ಮವರಿಗಾಗಿ ನಮ್ಮ ಧ್ವನಿ' ಸಮಾಜಮುಖಿ ಸೇವಾ ಸಂಘ ಕರ್ನಾಟಕ, ಕರ್ನಾಟಕ ರಾಜ್ಯ ಸರಕಾರಿ, ಅರೆ ಸರಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಬೆಂಗಳೂರು ಇವರ ಸಹಯೋಗದಲ್ಲಿ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಧಾರವಾಡದ ರಂಗಾಯಣ ಭವನದಲ್ಲಿ ಜರುಗಿದ 'ಸಾಂಸ್ಕೃತಿಕ ಕಲಾ ಸಂಭ್ರಮ' ಕಾರ್ಯಕ್ರಮದಲ್ಲಿ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಪಟ್ಟಣ ಸಮೀಪದ ನಾಗಾವಿ ತಾಂಡಾ ಗ್ರಾಮದ ಜನಪದ ಗಾಯಕ ಸಂತೋಷ ನಾರಾಯಣ ಪವಾರ ಅವರಿಗೆ 'ಹೆಮ್ಮೆಯ ಕನ್ನಡಿಗ' ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಗದುಗಿನ ಹಿರಿಯ ಬಿಜೆಪಿ ನಾಯಕ ಡಾ. ಶೇಖರ ಸಜ್ಜನರ ಅವರು ಲಕ್ಷ್ಮೇಶ್ವರ ಬಿಜೆಪಿ ಹಿರಿಯ ನಾಯಕರಾದ ಗಂಗಣ್ಣ ಮಹಾಂತಶೆಟ್ಟರ್, ಬಾಳಿಕಾಯಿ, ವಿಜಯ ಮೆಕ್ಕಿ, ಅಶೋಕ ಹುಂಬಿ, ಶಂಕರ ಮರಾಠೆ, ನವೀನ ಬೆಳ್ಳಟ್ಟಿ ಮುಂತಾದ ನಾಯಕರನ್ನು ಭೇಟಿಯಾಗಿ, ತಾವು ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂದು ತಿಳಿಸಿ ಬೆಂಬಲ ಯಾಚಿಸಿದರು.

## ಬೀದಿ ವ್ಯಾಪಾರಿಯ ಅಂತ್ಯಕ್ರಿಯೆಗೆ ಸಂಘಟನೆಯಿಂದ ಧನಸಹಾಯ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ತಿಲಕ ಪಾರ್ಕ್ ಹತ್ತಿರವಿರುವ ಬೀದಿ ವ್ಯಾಪಾರಿ ಸಂಘದ ಸಾಮಾನ್ಯ ಸದಸ್ಯೆ ಮಲ್ಲಮ್ಮ ಶಿಗ್ಲಿ ಎಂಬುವವಳು ಹೃದಯಾಘಾತದಿಂದ ಮೃತಪಟ್ಟ ಹಿನ್ನೆಲೆಯಲ್ಲಿ ಗದಗ ಜಿಲ್ಲಾ ಬೀದಿ ಬದಿ ವ್ಯಾಪಾರಸ್ಥರ ವಿವಿಧೋದ್ದೇಶಗಳ ಸಂಘಟನೆಯಿಂದ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮೃತರ ಕುಟುಂಬಕ್ಕೆ ಸಾಂತ್ವಾನ ಹೇಳಿ ಅಂತ್ಯಕ್ರಿಯೆಗೆ 10 ಸಾವಿರ ರೂ ಚೆಕ್‌ನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಸಂಘದ ಖಜಾಂಚಿ ಶಿವಕುಮಾರ ಮಧುರಕ ಮಾತನಾಡಿ, ಪಟ್ಟಣ ಮಾರಾಟ ಸಮಿತಿಯು ಬೀದಿ ವ್ಯಾಪಾರಿಗಳ ಶುಲ್ಕ ಸಂಗ್ರಹ ಮಾಡಿ ಕ್ರಿಯಾ ಯೋಜನೆ ಮೂಲಕ ಬೀದಿ ವ್ಯಾಪಾರಿಗಳ ಆಕಸ್ಮಿಕ ಅವಘಡಕ್ಕೆ ಹಾಗೂ ಆಕಸ್ಮಿಕ ಅನಾಹುತಗಳಿಗೆ ಹಾಗೂ ಮೃತಪಟ್ಟಲ್ಲಿ ಅವರ ಅಂತ್ಯಕ್ರಿಯೆಗೆ ಹಾಗೂ ಬೀದಿ ವ್ಯಾಪಾರಿಗಳ ಶ್ರೇಯೋಭಿವೃದ್ಧಿಗೆ ಶುಲ್ಕದ ಹಣ ಬಳಕೆ ಮಾಡುವಂತೆ ಸಾಕಷ್ಟು ಬಾರಿ ಮನವಿ ಮಾಡಲಾಗಿದೆ. ಆದರೆ, ಇದಕ್ಕೆ ಸೂಕ್ತ ಸ್ಪಂದನೆ ಸಿಕ್ಕಿಲ್ಲ ಎಂದರು.

ಸಂಘದ ಜಿಲ್ಲಾಧ್ಯಕ್ಷ ಮಕ್ತುಂಸಾಬ ನಾಲಬಂದ ಮೃತರ ಕುಟುಂಬಕ್ಕೆ ಸಾಂತ್ವಾನ ಹೇಳಿದರು. ಸಂಘದ ಪದಾಧಿಕಾರಿಗಳಾದ ಮಾರುತಿ ಸೋಳಂಕಿ, ಬಾಷಾಸಾಬ ಮಲ್ಲಸಮುದ್ರ, ಜಹಾಂಗೀರಹ್ಮದ ಮುಳುಗುಂದ, ಅಬ್ಬು ರಾಟಿ, ಬುಡೇಲಿ, ಅತ್ತಾರ, ರಾಜು ರೋಣದ, ಯೂಸುಫ ಶಿರಹಟ್ಟಿ, ನವೀನ ಭಂಡಾರಿ, ಮಾಬಿಲಿ ಧಾರಾವಾಡ, ಫಯಾಜಹ್ಮದ ನಾರಾಯಣಕೇರಿ, ದಾದು ಮುಂಡರಗಿ, ತಬರೇಜ ಪಠಾಣ, ನಜೀರಹ್ಮದ ಖವಾಸ, ರಶೀದಾ ಭಾ ನದಾಫ, ಕುತ್ತೇಜಾ ಎಮ್ ದೊಡ್ಡಮನಿ, ರಜೀಯಾ ಹತ್ತಿವಾಲೆ ಮುಂತಾದವರು ಉಪಸ್ಥಿತರಿದ್ದರು.

ದಾರುಲ್ ಅಶ್ ಅರಿಯ್ಯ ಸುರಿಬೈಲ್ ಇದರ ಬೆಳ್ಳಿಹಬ್ಬ ಸಂಭ್ರಮ ಮತ್ತು ಸನದುದಾನ ಮಹಾ ಸಮ್ಮೇಳನದಲ್ಲಿ ಸೈಯ್ಯದ್ ಖಲೀಲುಲ್ ಬುಖಾರಿ ಕಡಲುಂಡಿ ಅಶ್‌ಅರೀ ಬಿರುದನ್ನು ಪ್ರಧಾನ ಮಾಡಿದರು. ಇದೇ ಸಂದರ್ಭದಲ್ಲಿ ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಇವರ ಸಾಧನೆಯನ್ನು ಗುರುತಿಸಿ ಸಂಸ್ಥೆಯ ಪರವಾಗಿ ಅಂತಾರಾಷ್ಟ್ರೀಯ ವಾಗ್ಮಿ ಮೌಲಾನ ಪೇರೋಡ್ ಉಸ್ತಾದರು ಸನ್ಮಾನಿಸಿದರು. ಇವರು ಖಿದ್ಮಾ ಫೌಂಡೇಶನ್ ಕರ್ನಾಟಕ ಇದರ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



## ಕನ್ನಡ ರಕ್ಷಣೆಯ ಹೊಣೆ ನಮ್ಮೆಲ್ಲರದಾಗಿದೆ




■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಕನ್ನಡ ನಾಡು, ನುಡಿ, ನೆಲ, ಜಲದ ಬಗ್ಗೆ ಕಾಳಜಿ ವಹಿಸಿ ರಕ್ಷಿಸುವ ಹೊಣೆ ನಮ್ಮೆಲ್ಲರದಾಗಿದ್ದು, ಈ ಬಗ್ಗೆ ಪ್ರತಿಯೊಬ್ಬರಲ್ಲಿಯೂ ಜಾಗೃತಿ ಮೂಡಿಸಬೇಕಾಗಿದೆ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಎಸ್. ಪೂಜಾರ ಹೇಳಿದರು.

ಇಲ್ಲಿಯ ಗ್ರಾ.ಪಂ ಆವರಣದಲ್ಲಿ ದಾನ ಚಿಂತಾಮಣಿ ಅತ್ತಿಮಬ್ಬೆ ರಂಗ ಮಂದಿರದಲ್ಲಿ ಪುಟ್ಟರಾಜ ಸೇವಾ ಸಮಿತಿ ಹಾಗೂ ಪುಟ್ಟರಾಜ ಗ್ರಾಮೀಣ ಅಭಿವೃದ್ಧಿ ಹಾಗೂ ಸಾಂಸ್ಕೃತಿಕ ಕಲಾ ಮೇಳದ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ರಾಜ್ಯೋತ್ಸವ, ಕರ್ನಾಟಕ ಸಂಭ್ರಮ 50ರ ಅಂಗವಾಗಿ ಏರ್ಪಡಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ಶಂಕ್ರಯ್ಯ ಹಿರೇಮಠ, ಕೊಟ್ರಯ್ಯಶಾಸ್ತ್ರಿಗಳು ಹಿರೇಮಠ ಕನ್ನಡ ಭಾಷೆಯ ಕುರಿತು ಮಾತನಾಡಿದರು. ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ, ಬಾಲಕಿಯರ ಸರಕಾರಿ ಪ್ರೌಢಶಾಲೆ, ಸರಕಾರಿ ಹೆಣ್ಣು ಮಕ್ಕಳ ಶಾಲೆ, ಬಾಪೂಜಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಪುಟ್ಟರಾಜ ಜಾನಪದ ಕಲಾತಂಡದ ಶರಣಪ್ಪ ಗರ್ಜಪ್ಪನವರ, ಇಮ್ರಾನ್ ಕೊರ್ಲಹಳ್ಳಿ, ಈರಣ್ಣ ಹೂಗಾರ, ಅನಸೂಯಾ ಭೂಮಣ್ಣವರ, ರತ್ನಾ ಮುರಾರಿ, ಮಂಜುನಾಥ ಗರ್ಜಪ್ಪನವರ, ಬಸನಗೌಡ ಪಾಟೀಲ ಅವರಿಂದ ಜಾನಪದ ಗೀತೆಗಳು ಮೊಳಗಿದವು.

ಪುಟ್ಟರಾಜ ಕಲಾ ಮೇಳದ ಅಧ್ಯಕ್ಷ ಕೇಶವ ಗುದಗಿ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ರಾಮಣ್ಣ ನಿಡಗುಂದಿ, ಶಿಕ್ಷಕರಾದ ನಾಗಪ್ಪ ಅಂಬಕ್ಕಿ, ಪ್ರೇಮಾ ಕರಮುಡಿ, ಜ್ಯೋತಿ ಕಮತರ ಉಪಸ್ಥಿತರಿದ್ದರು. ಅಶೋಕ ಮೇಟಿ ನಿರೂಪಿಸಿದರು. ಪ್ರವೀಣ ಕಲಾಲ ವಂದಿಸಿದರು.

## ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಒದಗಿಸಲು ಮನವಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಿರಹಟ್ಟಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ವಿಶೇಷ ಅನುದಾನ ಹಾಗೂ ನೆನೆಗುದಿಗೆ ಬಿದ್ದಿರುವ ಕ್ಷೇತ್ರದ 29 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಅನುಷ್ಠಾನಕ್ಕೆ ಅನುದಾನ ಕಲ್ಪಿಸಬೇಕು ಎಂದು ಶಾಸಕ ಡಾ. ಚಂದ್ರು ಲಮಾಣಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಶಿರಹಟ್ಟಿ ಮತಕ್ಷೇತ್ರದಲ್ಲಿ ಬಹುತೇಕ ರಸ್ತೆಗಳು ಹಾಳಾಗಿವೆ. ಕುಡಿಯುವ ನೀರಿನ ಯೋಜನೆಗಳು ನೆನೆಗುದಿಗೆ ಬಿದ್ದಿವೆ.

ಲಕ್ಷ್ಮೇಶ್ವರ ಪಟ್ಟಣಕ್ಕೆ ಪ್ರತ್ಯೇಕ ಕುಡಿಯುವ ನೀರಿನ ಪೈಪ್‌ಲೈನ್ ಆಗಬೇಕು. ಹಿಂದುಳಿದ ಕ್ಷೇತ್ರದ ಅಭಿವೃದ್ಧಿಗಾಗಿ ಸರಕಾರದಿಂದ ವಿಶೇಷ ಅನುಧಾನ ಕಲ್ಪಿಸಬೇಕು ಎಂದು ವಿವರಣೆ ನೀಡಿದರು.

ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳುವದಾಗಿ ಭರವಸೆ ನೀಡಿದರು. ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ಸಚಿವ ಕೆ.ಎಚ್. ಮುನಿಯಪ್ಪ, ಶಿವರಾಜ್ ತಂಗಡಗಿ, ಶಾಸಕ ಶ್ರೀನಿವಾಸ್ ಮಾನೆ, ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ ಮುಂತಾದವರಿದ್ದರು.


ಕರ್ನಾಟಕ ಸರ್ಕಾರ

**ಕಾರ್ಯಪಾಲಕ ಅಭಿಯಂತರರು**

**ಲೋಕೋಪಯೋಗಿ ಇಲಾಖೆ ವಿಭಾಗ ಗದಗ**

Phone No: 08372-238782 Fax No. 08372-237268

E.Mail : eepwdgad@gmail.com

ನಂ:ಕಾನಿಇಂಗಃಲೋಇ:ಪಿಬಿ-1 5 :ವಿವಿಧ: 2023-24/3414

ದಿನಾಂಕ : 06-11-2023

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **103.66** ಲಕ್ಷ ಮೊತ್ತದಲ್ಲಿ ಒಟ್ಟು 17 ಕಾಮಗಾರಿಗಳಿಗೆ (ಕನಿಷ್ಟ ಮೊತ್ತ ರೂ. **3.50** ಲಕ್ಷ ಗರಿಷ್ಟ ಮೊತ್ತ ರೂ. **11.56** ಲಕ್ಷ) ಕೆಪಿಪಿಪಿ (**kppp**) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (**kppp**) ಸ್ಟಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ- 1 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http://www.kppp.Karnataka.gov.in/** ದಲ್ಲಿ ನೋಡಿಕೊಳ್ಳಬಹುದು.

**Work Indent No** : 6303, 6301, 6283, 6284-SC, 5400-SC, 5666, 656 Call-2-ST, 3767 Call-2, 4458 Call-2, 3633Call-2, 3769 Call-3-SC, 6302, 5524, 5661, 6553 , 5665 & 6217-SC.

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪಶ್ನೋತ್ತರ ದಿನಾಂಕ : **13-11-2023**, ಟೆಂಡರ್ ಸಲ್ಲಿಸುವ ದಿನಾಂಕ : **16-11-2023** ಆರ್ಥಿಕ ಬಿಡ್ ತೆರೆಯುವ ದಿನಾಂಕ : **17-11-2023.**

ಜಿ.ಎಸ್.ಟಿ ಮೊತ್ತವನ್ನು ಚಾಲ್ತಿಯಲ್ಲಿರುವ ಸರ್ಕಾರದ ಅದೇಶದಂತೆ ಪಾವತಿಸಲಾಗುವದು. ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರಲೇ ಭರಿಸತಕ್ಕದ್ದು.

**ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/288/2023-24


### ಕಸಾಪ ವತಿಯಿಂದ ರಾಜ್ಯೋತ್ಸವದ ಅಂಗವಾಗಿ ವಿಶೇಷ ಉಪನ್ಯಾಸ ಮಾಲಿಕೆ

# ಕನ್ನಡ ಶಾಲೆಗಳ ಅಭಿವೃದ್ಧಿಯ ಹರಿಕಾರ ಡೆ. ಚನ್ನಬಸಪ್ಪ



ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಮರಾಠಿ ಶಾಲೆಗಳನ್ನು ಕಡಿಮೆ ಮಾಡಿ ಕನ್ನಡ ಶಾಲೆಗಳನ್ನು ನಡೆಸಬೇಕೆಂದ ಡೆಪ್ಯುಟಿ ಚನ್ನಬಸಪ್ಪನವರು ಶಿಕ್ಷಕರ ನೇಮಕಾತಿ ಅವಕಾಶಗಳನ್ನು ಮಾಡಿಕೊಟ್ಟು ಕನ್ನಡದ ವಾತಾವರಣ ನಿರ್ಮಾಣ ಮಾಡಿ, ಕನ್ನಡದ ಬೆಳವಣಿಗೆಗೆ ಕಾರಣರಾದರೆಂದು ತಿಳಿಸಿದರು. ಗದುಗಿನಲ್ಲಿ ವಿದ್ಯಾದಾನ ಸಮಿತಿ ನಿಜವಾದ ಅರ್ಥದಲ್ಲಿ ವಿದ್ಯಾದಾನವನ್ನು ಮಾಡುತ್ತ ಒಂದು ಶತಮಾನ ಪೂರ್ಣಗೊಳಿಸಿದೆಯೆಂದರು.

■ವಿಜಯಸಾಕ್ಷಿ ಸುದ್ದಿ, ಗದಗ

19ನೇ ಶತಮಾನದಲ್ಲಿ ಮುಂಬೈ ಕರ್ನಾಟಕ ಭಾಗಗಳು ಮರಾಠಿಯ ಪ್ರಾಬಲ್ಯದಿಂದ ಕನ್ನಡ ನಲುಗಿ ಹೋಗಿತ್ತು. ಈ ಸಂದರ್ಭದಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವ ಮಹಾ ಕಾರ್ಯವನ್ನು ಕನ್ನಡ ಶಾಲೆಗಳನ್ನು ಸ್ಥಾಪಿಸುವ ಮೂಲಕ ನಾಂದಿ ಹಾಡಿದವರು ಡೆಪ್ಯುಟಿ ಚನ್ನಬಸಪ್ಪನವರು ಎಂದು ಗದುಗಿನ ಪಿ.ಪಿ.ಜಿ ಪದವಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ರಾಜಶೇಖರ ದಾನರಡ್ಡಿ ನುಡಿದರು.

ಜಿಲ್ಲಾ ಕಸಾಪ ವತಿಯಿಂದ ತೋಂಟದ ಸಿದ್ಧಲಿಂಗಶ್ರೀಗಳ ಕನ್ನಡ ಭವನದಲ್ಲಿ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಅವರು ಮಾತನಾಡಿದರು.

ಶತಮಾನ ಪೂರೈಸಿದ ಗದುಗಿನ ವಿದ್ಯಾಸಂಸ್ಥೆ 'ವಿದ್ಯಾದಾನ ಸಮಿತಿ'ಗೆ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ 2023ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯ ಗೌರವ ಲಭಿಸಿದ ಪ್ರಯುಕ್ತ ಸಂಸ್ಥೆಯ ಅಧ್ಯಕ್ಷ ಡಿ.ಬಿ. ಹುಯಿಲಗೋಳ, ಕಾರ್ಯದರ್ಶಿ ಶ್ರೀನಿವಾಸ ಹುಯಿಲಗೋಳ ಹಾಗೂ ಡಿ.ಸಿ. ಪಾವಟೆ ಸ್ಮರಣಾರ್ಥ ಉತ್ತಮ ಎನ್‌ಎಸ್‌ಎಸ್ ಅಧಿಕಾರಿ ಪ್ರಶಸ್ತಿ ಪಡೆದ ಬಾಹುಬಲಿ ಜೈನರ್ ಅವರನ್ನು ಸನ್ಮಾನಿಸಲಾಯಿತು.

ಡಿ.ಬಿ.ಹುಯಿಲಗೋಳ ಮಾತನಾಡಿ, ಹಿರಿಯರ ಪರಿಶ್ರಮದಿಂದ ಕಟ್ಟಿದ ವಿದ್ಯಾಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ. ಇಲ್ಲಿ ಅಸಂಖ್ಯಾತ ವಿದ್ಯಾರ್ಥಿಗಳು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಕಟ್ಟಿದ ಒಂದು ವಿದ್ಯಾ ಸಂಸ್ಥೆ ನೂರು ವರ್ಷಗಳ ಅವಧಿಯನ್ನು ದಾಟಿ ಬಂದಿರುವುದರ ಹಿಂದೆ ಅರ್ಪಣಾ ಮನೋಭಾವದ ಶಿಕ್ಷಕರ ಶ್ರಮವಿದೆ ಎಂದರು. ಶ್ರೀನಿವಾಸ ಹುಯಿಲಗೋಳ ಮಾತನಾಡಿ, ವಿದ್ಯಾದಾನ ಸಮಿತಿಯ ಶಾಲೆಯಲ್ಲಿ ವಿದ್ಯಾರ್ಜನೆ ಮಾಡಿದ ವಿದ್ಯಾರ್ಥಿಗಳ ಬಳಗ ಸಾಹಿತಿಗಳಾಗಿ, ವಿಜ್ಞಾನಿಗಳಾಗಿ, ತಂತ್ರಜ್ಞಾನರಾಗಿ ಅಲ್ಲದೇ ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡು ಪ್ರತಿಭಾ ಸಂಪನ್ನರಾಗಿ ಹೊರಹೊಮ್ಮಿದ್ದಾರೆ. ಸಂಸ್ಥೆಗೆ ಇಂತಹ ವಿದ್ಯಾರ್ಥಿಗಳೇ ನಿಜವಾದ ಆಸ್ತಿ ಎಂದರು. ಮಾಜಿ ಸಚಿವ ಎಸ್. ಎಸ್. ಪಾಟೀಲ ಸಾಧಕರನ್ನು ಸನ್ಮಾನಿಸಿದರು. ಮಂಜುಳಾ ವೆಂಕಟೇಶಯ್ಯ ಹಾಗೂ ಸಹನಾ ಗಾಜಿ ಕವನ ವಾಚಿಸಿದರು. ಸಂಗೀತ ಕಲಾವಿದೆ ಲತಾ ಮಾಂಡ್ರೆ ಇವರಿಂದ ಕನ್ನಡ ಗೀತಗಾಯನ ಕಾರ್ಯಕ್ರಮ ನೆರವೇರಿತು. ಶ್ರೀಕಾಂತ ಬಡ್ಡೂರ ಪರಿಚಯಿಸಿದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಡಾ. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಶಿವಾನಂದ ಗಿಡ್ನಂದಿ ವಂದಿಸಿದರು.

ಕಾರ್ಯಕ್ರಮದಲ್ಲಿ ಪ್ರೊ. ಚಂದ್ರಶೇಖರ ವಸ್ತ್ರದ, ಡಾ. ಜಿ.ಬಿ. ಪಾಟೀಲ, ಡಾ.ನಾಗಪ್ಪ ಸುರಳಿಕೇರಿ, ಡಾ. ಶಂಕರ ಬಾರಿಕೇರ, ಆರ್.ಕೆ. ಮೋನೆ, ಪ್ರೊ. ವಿ.ಎಸ್ ದಲಾಲಿ, ಜೆ.ಎ. ಪಾಟೀಲ, ಬಿ.ಬಿ. ಪಾಟೀಲ, ಡಾ. ಬಿ.ಎಲ್. ಚವಾಣ, ಅ.ದ. ಕಟ್ಟೀಮನಿ, ಸಿ.ಎಂ. ಮಾರನಬಸರಿ, ಬಿ.ಬಿ. ಮಿರ್ಜಿ, ಶಶಿಕಾಂತ ಕೊರ್ಲಹಳ್ಳಿ, ಎಸ್.ಎಂ ಕಾತರಕಿ, ಗಿರಿಜಕ್ಕ ಧರ್ಮರಡ್ಡಿ, ರತ್ನಕ್ಕ ಪಾಟೀಲ, ಶೈಲಜಾ ಗಿಡ್ನಂದಿ, ಮೀನಾಕ್ಷಿ ಜಂಗಮನಿ, ನಿರ್ಮಲಾ ಜಂಗಮನಿ, ಮಂಜುಳಾ ವೆಂಕಟೇಶಯ್ಯ, ವಿದ್ಯಾ ಪಾಟೀಲ, ಈರಮ್ಮ ತಾಳಿಕೋಟಿ, ವಿದ್ಯಾ, ಬಸವರಾಜ ಕರಮುಡಿ, ಪ್ರ ತೋ.ನಾರಾಯಣಪುರ, ಶರಣಪ್ಪ ಹೊಸಂಗಡಿ, ಎಂ.ವಿ. ಕೆಂಬಾವಿಮಠ, ಅಶೋಕ ಸತ್ಯರಡ್ಡಿ, ಶಿವಲಿಂಗಪ್ಪ ಅಣ್ಣಿಗೇರಿ, ಮಲ್ಲಪ್ಪ ಡೋಣಿ, ವಿಶ್ವನಾಥ ಕಮ್ಮಾರ, ಎಂ.ಎಂ. ಶೆಟವಾಜಿ, ಈಶ್ವರ ಕುರಿ, ಬಸವರಾಜ ವಾರಿ, ಲಿಂಗರಾಜ ಪಾಟೀಲ, ರವಿ ಪೂಜಾರ, ಸತೀಶಕುಮಾರ ಚನ್ನಪ್ಪಗೌಡರ, ಡಿ.ಎಸ್. ಬಾಪುರಿ, ರಾಜಶೇಖರ ಕರಡಿ, ಎಸ್.ಎಫ್. ಬೆಣಕಣ್ಣವರ, ಎಸ್.ಸಿ. ಹಾಲಕೇರಿ, ಕೆ.ಜಿ. ವ್ಯಾಪಾರಿ, ಈರನಗೌಡ ಮಣಕವಾಡ, ಬಿ.ಬಿ. ಹೊಳಗುಂದಿ ಉಪಸ್ಥಿತರಿದ್ದರು.

# ಏಕೀಕರಣದ ಅವಧಿಯಲ್ಲೂ ಗದಗ ವೈದ್ಯಕೀಯವಾಗಿ ಮುಂದಿತ್ತು



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಏಕೀಕರಣ ಅವಧಿಯಲ್ಲಿ ಗದಗ ಪರಿಸರವು ವೈದ್ಯಕೀಯ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಹೊಂದಿತ್ತು ಎಂದು ಗದುಗಿನ ಹಿರಿಯ ವೈದ್ಯ ಡಾ.ಶಶಿಧರ ರೇಶ್ಮೆ ಅಭಿಪ್ರಾಯಪಟ್ಟರು.

ಗದುಗಿನ ಡಾ.ಕುಲಕರ್ಣಿ ಮತ್ತು ಸಜ್ಜನರ ಹಾಸ್ಪಿಟಲ್‌ನ ಸುವರ್ಣ ಸಂಭ್ರಮೋತ್ಸವದ ಔಪಚಾರಿಕ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ವರು ಮಾತನಾಡಿದರು.

ಡಾ. ಎನ್.ಎಚ್. ಗೋಡಬೋಲೆ, ಡಾ. ಆರ್.ಡಿ. ಕುಲಕರ್ಣಿ, ಡಾ. ಎಸ್.ಆರ್. ಕುಲಕರ್ಣಿ, ಡಾ. ಆರ್.ಟಿ. ಕುಲಕರ್ಣಿ, ಡಾ. ಬಿ.ಎಂ. ಆಲೂರ, ಡಾ. ಎನ್.ಎಸ್. ಹುಂಬರವಾಡಿ, ಡಾ. ಎಂ.ಎಂ. ಮುಳಗುಂದ ಸೇರಿದಂತೆ ಹಿರಿಯ ತಜ್ಞ ವೈದ್ಯರು ಅಂದಿನ ದಿನಗಳಲ್ಲಿ ಹೆಸರಾಂತರ ವೈದ್ಯರಾಗಿದ್ದರು. ಅತ್ಯಾಧುನಿಕ ಸೌಲಭ್ಯಗಳಿಲ್ಲದ ಕಾಲದಲ್ಲೂ ರೋಗಿಗಳ ಆರೈಕೆ, ಶಸ್ತ್ರಚಿಕಿತ್ಸೆಯಲ್ಲಿ ಅತ್ಯುನ್ನತ ಗುಣಮಟ್ಟದ ಸೇವೆ ಸಲ್ಲಿಸಿದ ಶ್ರೇಯಸ್ಸು ಅಂದಿನ ವೈದ್ಯರುಗಳಿಗೆ ಸಲ್ಲುವದು ಎಂದರು.

ಪ್ರಾರಂಭದಲ್ಲಿ ಪ್ರಾರ್ಥಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಡಾ.ರಾಧಿಕಾ ಕುಲಕರ್ಣಿ, ನಮ್ಮ ಆಸ್ಪತ್ರೆಯಲ್ಲಿ ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಸೂಚನಾ ಫಲಕ, ದೇವರ ಶ್ಲೋಕ, ಸುಭಾಷಿತ, ದಾರ್ಶನಿಕರ ನುಡಿಗಟ್ಟುಗಳನ್ನು ಕನ್ನಡದಲ್ಲಿ ಬರೆಯಿಸಿ ಕನ್ನಡ ಜಾಗೃತಿ ಮಾಡುವ ಸಣ್ಣ ಪ್ರಯತ್ನ ಸಹಜವಾಗಿ ನಡೆದಿದೆ. ಆಸ್ಪತ್ರೆಯ ಪ್ರಾರ್ಥನಾ ಮಂದಿರದಲ್ಲಿ ನಿತ್ಯ ವಿಶೇಷ ಪೂಜೆ, ಪ್ರಾರ್ಥನೆ ಯಥಾವತ್ತಾಗಿ ನಡೆದುಕೊಂಡು ಬಂದಿದೆ ಎಂದರು.

ಡಾ.ಉದಯ ಕುಲಕರ್ಣಿ, ಹಿರಿಯರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ವೈದ್ಯಕೀಯ ತತ್ವ-ಸಿದ್ಧಾಂತಗಳನ್ನು ಗೌರವಿಸಿ, ಜನರ ಆರೋಗ್ಯ ಸುಧಾರಣೆಯಲ್ಲಿ ಮುಂದೆ ಸಾಗಿದ್ದೇವೆ. ನಮ್ಮ ಮಕ್ಕಳಿಗೂ ಸೊಸೆಗೂ ಈ ಸನ್ಮಾರ್ಗದಲ್ಲಿ ಮುನ್ನಡೆಯಲು ಮಾರ್ಗದರ್ಶನ ಮಾಡಿದ್ದೇವೆ ಎಂದರು.

# ಯುವ ಶಕ್ತಿ ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನ, ಸಾಮಾಜಿಕ ಜವಾಬ್ದಾರಿ, ಕರ್ತವ್ಯ ಪ್ರಜ್ಞೆ ಮೂಡಿಸುವದರೊಂದಿಗೆ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯ ಮಾಡುತ್ತಿರುವದು ಶ್ಲಾಘನೀಯ ಎಂದು ಬಿಸಿಎನ್ ವಿದ್ಯಾಸಂಸ್ಥೆಯ ನಿರ್ದೇಶಕ ಲೋಹಿತ್ ನೆಲವಿಗಿ ಹೇಳಿದರು.



ಅವರು ಇತ್ತೀಚೆಗೆ ಪಟ್ಟಣದ ಬಿಸಿಎನ್ ಸಿರಿ ಕಾಲೇಜು ಆವರಣದಲ್ಲಿ ಎಬಿವಿಪಿ ವತಿಯಿಂದ ಹಮ್ಮಿಕೊಂಡಿದ್ದ ನಗರ ಯೋಜನಾ ಬೈಠಕ್‌ನ್ನು ಉದ್ಘಾಟಿಸಿ ಮಾತನಾಡಿ, ದೇಶದ ಸಂಪತ್ತಾದ ಯುವ ಶಕ್ತಿ ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ. ಈ ನಿಟ್ಟಿನಲ್ಲಿ ಎಬಿವಿಪಿ ರಾಷ್ಟ್ರದ ಪ್ರಗತಿಯ ಚಿಂತನೆಯ ಜತೆಗೆ ಯುವಕರಿಗೆ ಉತ್ತಮ ಭವಿಷ್ಯ ರೂಪಿಸುವ ಕಾರ್ಯವನ್ನು ಮಾಡುತ್ತಿದೆ. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಿ ಅವರಲ್ಲಿ ಆತ್ಮಬಲ ತುಂಬುವ ಕಾರ್ಯ ಮಾಡುತ್ತಿದೆ. ವಿದ್ಯಾರ್ಥಿಗಳು ಇಂತಹ ಸಂಘಟನೆಗಳಲ್ಲಿ ಪಾಲ್ಗೊಂಡು ಉತ್ತಮ ಕಾರ್ಯ ಮಾಡುವತ್ತ ಮುಂದಾಗಿ ಎಂದು ಕರೆನೀಡಿದರು.

ಈ ಸಂದರ್ಭದಲ್ಲಿ ರಾಜಶೇಖರ ಶಿರಹಟ್ಟಿ, ವೀರೇಶ ಸಾಸಲವಾಡ ಮಾತನಾಡಿದರು. ಎಬಿವಿಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಅಭಿಷೇಕ ದೊಡ್ಡಮನಿ, ಮಂಜುನಾಥ ಬಂಡಿವಾಡ, ಚಂದ್ರು ಕುಂದಗೋಳ, ಶರಣಪ್ಪ ಶಿವನಗೌಡ್ರ, ಅರುಣ ಕಳ್ಳಿಹಾಳ, ದರ್ಶನ ಅಕ್ಕಿ, ಪ್ರದೀಪ ಶೆಟ್ಟರ, ಚೇತನ್ ಯಲಿಗಾರ, ಮಾಲತೇಶ ಮಣಕವಾಡ, ಸಾಗರ ಮೆಹರವಾಡೆ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

# 25ನೇ ವರ್ಷದ ದಿಂಡಿ ಯಾತ್ರೆ



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ತಾಲ್ಲೂಕಿನ ಶಿಂಗಟಾಲೂರ ಗ್ರಾಮದ ಗೊಂದಳಿ ಸಮಾಜದ ಪಂಢರಾಪುರ ಪಾದಯಾತ್ರಾ ಸೇವಾ ಮಂಡಳಿಯ ಕಾರ್ಯಕರ್ತರು ಸೋಮವಾರ ತಾಲೂಕಿನ ಶಿಂಗಟಾಲೂರ ವೀರಭದ್ರೇಶ್ವರ ದೇವಸ್ಥಾನದಿಂದ 25ನೇ ದಿಂಡಿ ಯಾತ್ರೆಯನ್ನು ಕೈಗೊಂಡರು.

ಗ್ರಾಮದಲ್ಲಿರುವ ಪಾಂಡುರಂಗನ ದೇವಸ್ಥಾನದಲ್ಲಿ ಗೊಂದಳಿ ಸಮಾಜದ ಕಾರ್ಯಕರ್ತರು ವಿಶೇಷ ಪೂಜೆ ಹಾಗೂ ಹಲವು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಮುಂಜಾನೆ ಪಾಂಡುರಂಗ ಹಾಗೂ ದೇವಸ್ಥಾನದಲ್ಲಿರುವ ವಿವಿಧ ದೇವರ ಮೂರ್ತಿಗಳಿಗೆ ಮಹಾರುದ್ರಾಭಿಷೇಕ, ತುಳಸಿ ಅರ್ಚನೆ, ಮಹಾಮಂಗಳಾರತಿ ನೆರವೇರಿಸಿದರು.

ವೀರಭದ್ರೇಶ್ವರ ದೇವಸ್ಥಾನಕ್ಕೆ ತೆರಳಿದ ಭಕ್ತ ಸಮೂಹವು ಅಲ್ಲಿ ವೀರಭದ್ರೇಶನಿಗೆ ವಿಶೇಷ ಪೂಜೆ ನೆರವೇರಿಸಿ, ದಿಂಡಿ ಯಾತ್ರೆಯನ್ನು ಆರಂಭಿಸಿದರು. 18 ದಿನಗಳ ಕಾಲ ಭಕ್ತರು ಪಂಢರಾಪುರಕ್ಕೆ ಪಾದಯಾತ್ರೆಯ ಮೂಲಕ ತೆರಳಲಿದ್ದಾರೆ. ಕಳೆದ 25ವರ್ಷಗಳಿಂದ ನಿರಂತರವಾಗಿ ಶಿಂಗಟಾಲೂರ ಗ್ರಾಮದ ಗೊಂದಳಿ ಸಮಾಜದ ಭಕ್ತರು ಪಂಢರಪುರಕ್ಕೆ ಪಾದಯಾತ್ರ ಕೈಗೊಳ್ಳುತ್ತಿದ್ದಾರೆ.

ಈ ವರ್ಷ ಭಕ್ತರ ಸಂಖ್ಯೆ ಹೆಚ್ಚಾಗಿದ್ದು, ಭಗವಂತನ ಕೃಪಾಶೀರ್ವಾದದಿಂದ ಸುಸೂತ್ರವಾಗಿ ಪಂಢರಪುಕ್ಕೆ ತೆರಳಿ ಪಾಂಡುರಂಗನ ದರ್ಶನ ಪಡೆಯಲಿದ್ದೇವೆ ಎಂದು ದಿಂಡಯ ಹವಾಲ್ದಾರ್ ದೊಡ್ಡವೀರಪ್ಪ ಕಾಕಡೆ ತಿಳಿಸಿದರು.

ಹಾಲಪ್ಪ ಗಣಾಚಾರಿ, ರಾಮಸ್ವಾಮಿ ದೊಸಿಗೇರ, ದೊಡ್ಡವೀರಪ್ಪ ಕಾಕಡೆ, ದುರುಗೇಶ ಗಣಾಚಾರಿ, ಗಂಗಪ್ಪ ಪಾರಗೆ, ದುರುಗಮ್ಮ ಕಾಕಡೆ, ಹನುಮವ್ವ ಕಾಕಡೆ, ಪ್ರಶಾಂತ ಕಾಕಡೆ, ದಾಮೋದರ ಗಣಾಚಾರಿ, ಗಂಗಪ್ಪ ಪಾರಗೆ, ಸುರೇಶ ಕಾಕಡೆ ದಿಂಡಿ ಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ.

# ರಾಷ್ಟ್ರೀಯ ಮಕ್ಕಳ ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಗೆ ಪ್ರಣತಿ ಗಡಾದ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕವು ದೆಹಲಿ ಘಟಕದ ಸಹಯೋಗದಲ್ಲಿ ನ.15ರಂದು ದೆಹಲಿಯಲ್ಲಿ ಹಮ್ಮಿಕೊಂಡಿರುವ 'ರಾಷ್ಟ್ರೀಯ ಪ್ರಥಮ ಹೊರನಾಡು ಮಕ್ಕಳ ಸಾಹಿತ್ಯ ಸಮ್ಮೇಳನ'ದ ಪ್ರಬಂಧ ಗೋಷ್ಠಿಗೆ ಇಲ್ಲಿಯ ಕೆಎಲ್‌ಇ ಶಾಲೆಯ 8ನೇ ತರಗತಿಯ ವಿದ್ಯಾರ್ಥಿನಿ ಪ್ರಣತಿ ಆರ್.ಗಡಾದ ಆಯ್ಕೆಯಾಗಿದ್ದಾರೆಂದು ಸಮ್ಮೇಳನದ ಸಂಚಾಲಕ ಅರುಣ್ ತಿಳಿಸಿದ್ದಾರೆ.

ರಾಷ್ಟ್ರೀಯ ಪ್ರಥಮ ಹೊರನಾಡ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಕನ್ನಡದ ಖ್ಯಾತ ಕವಿ ಜಯಂತ್ ಕಾಯ್ಕಿಣಿ ಉದ್ಘಾಟಿಸಲಿದ್ದು, ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸುದಿತಿ ಅಂಬಳೆ ಹಾಗೂ ಸಹ ಅಧ್ಯಕ್ಷರಾಗಿ ನೂತನ್ ಕೈಕಾಡೆ



ಈಗಾಗಲೇ ಆಯ್ಕೆಯಾಗಿದ್ದಾರೆ. ಸಮ್ಮೇಳನದ ಅಂಗವಾಗಿ ನಡೆಯುವ ಎಲ್ಲಾ ಗೋಷ್ಠಿಗಳಲ್ಲಿ ರಾಜ್ಯದ ಹಾಗೂ ರಾಷ್ಟ್ರದ ಪ್ರತಿಭಾವಂತ ಮಕ್ಕಳು ಭಾಗವಹಿಸಲಿದ್ದು, ಅಧ್ಯಕ್ಷತೆಯನ್ನು ಕೂಡ ಮಕ್ಕಳೇ ವಹಿಸಲಿದ್ದಾರೆ. ಸಂವಾದ ಕಾರ್ಯಕ್ರಮಕ್ಕೆ ಗದಗ ಜಿಲ್ಲೆಯ ಕು. ಆಕಾಶ್ ಹಂಸನೂರ ಅವರಿಗೂ ಆಹ್ವಾನ ನೀಡಲಾಗಿದೆ ಎಂದು ಸಹ-ಕಾರ್ಯದರ್ಶಿ ಅರುಣ ತಿಳಿಸಿದ್ದಾರೆ.

ಪ್ರಬಂಧ ಮಂಡನೆಗೆ ಆಯ್ಕೆಯಾದ ಪ್ರಣತಿ ಗಡಾದ ಈಗಾಗಲೇ ಅಖಿಲ ಭಾರತ ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ, ಅಖಿಲ ಕರ್ನಾಟಕ 9ನೇ ಮಕ್ಕಳ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ, ಪ್ರತಿಷ್ಠಿತ ಮೈಸೂರು ದಸರಾ ಕವಿಗೋಷ್ಠಿ ಸೇರಿದಂತೆ ಹಲವಾರು ಪ್ರಮುಖ ಕವಿಗೋಷ್ಠಿಗಳಲ್ಲಿ, ಸಂವಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ. ಇದೇ ಮೊದಲ ಬಾರಿಗೆ ರಾಷ್ಟ್ರೀಯ ಮಕ್ಕಳ ಸಾಹಿತ್ಯ ಸಮ್ಮೇಳನಕ್ಕೆ ಆಯ್ಕೆಯಾದ ಪ್ರಣತಿ ಗಡಾದರನ್ನು ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು, ಸಿರಿಗನ್ನಡ ವೇದಿಕೆ, ವಚನ ಸಾಹಿತ್ಯ ಪರಿಷತ್ತು ಮುಂತಾದ ಸಂಘಟನೆಗಳು ಅಭಿನಂದಿಸಿವೆ.

**ಜನತಾ ದರ್ಶನ ಕಾರ್ಯಕ್ರಮ ಉದ್ಘಾಟಿಸಿದ ಸಚಿವ ಸಂತೋಷ್ ಲಾಡ್ ಅಭಿಮತ**

# ಜನಪರ ಕೆಲಸಕ್ಕೆ ಜನತಾ ದರ್ಶನ ಉತ್ತಮ ಮಾಧ್ಯಮ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಸಾರ್ವಜನಿಕರಿಗೆ ಉತ್ತಮ ಆಡಳಿತ ವ್ಯವಸ್ಥೆ ಮತ್ತು ಅವರಲ್ಲಿ ರಾಜ್ಯ ಸರಕಾರದ ಸೌಲಭ್ಯಗಳ ಅರಿವು ಮೂಡಿಸಿ, ಯೋಜನೆಗಳನ್ನು ತಲುಪಿಸಲು ಜನತಾ ದರ್ಶನ ಕಾರ್ಯಕ್ರಮ ಮಹತ್ವದ ಮಾಧ್ಯಮವಾಗಿದೆ. ಇದರಿಂದ ಸರಕಾರ ಹೆಚ್ಚು ಹೆಚ್ಚು ಜನಪರವಾಗಿ ಕೆಲಸ ಮಾಡಲು ಅನುಕೂಲವಾಗುತ್ತಿದೆ ಎಂದು ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.




ಅವರು ಗುರುವಾರ ಕೆಸಿಡಿ ಆವರಣದ ಸೃಜನಾ ರಂಗಮಂದಿರದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಜನತಾ ದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜನತಾ ದರ್ಶನದಲ್ಲಿ ಸ್ವೀಕರಿಸಿರುವ ಅರ್ಜಿಗಳನ್ನು ಕಾಲಮಿತಿಯಲ್ಲಿ ಪರಿಹರಿಸುತ್ತೇವೆ. ಅರ್ಜಿದಾರರು ಅವಸರ ಮಾಡದೇ, ತಾಳ್ಮೆಯಿಂದ ಇರಬೇಕು. ಅರ್ಜಿಗಳ ಕಾನೂನಾತ್ಮಕತೆಯನ್ನು ಪರಿಶೀಲನೆ ಮಾಡಲಾಗುತ್ತದೆ. ಎಲ್ಲ ಸ್ವೀಕೃತ ಅಹವಾಲುಗಳನ್ನು ನಿಯಮಾನುಸಾರ ಇತ್ಯರ್ಥ ಪಡಿಸಲಾಗುತ್ತದೆ ಎಂದು ಸಚಿವ ಸಂತೋಷ ಲಾಡ್ ತಿಳಿಸಿದರು.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಜನತಾ ದರ್ಶನ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಅವರು ಸ್ವಾಗತಿಸಿದರು.

ವೇದಿಕೆಯಲ್ಲಿ ವಿ.ಪ ಸದಸ್ಯ ಪ್ರದೀಪ ಶೆಟ್ಟರ, ಮಹಾನಗರ ಪೊಲೀಸ್ ಆಯುಕ್ತೆ ರೇಣುಕಾ ಸುಕುಮಾರ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲ್ ಬ್ಯಾಕೋಡ, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಮಹಾನಗರಪಾಲಿಕೆ ಆಯುಕ್ತ ಈಶ್ವರ ಉಳ್ಳಾಗಡ್ಡಿ, ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಬಿ.ಎಸ್. ಮುಗನೂರಮಠ, ಡಿಎಫ್‌ಓ ಸೋನಲ್ ವೃಷ್ಣಿ, ಉಪವಿಭಾಗಾಧಿಕಾರಿ ಶಾಲಂ ಹುಸೇನ್, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಆಯುಕ್ತ ಡಾ.ಸಂತೋಷಕುಮಾರ ಬಿರಾದಾರ, ಭೂದಾಖಲೆಗಳ ಇಲಾಖೆ ಉಪನಿರ್ದೇಶಕ ಮೋಹನ ಶಿವಣ್ಣನವರ, ಹೆಸ್ಕಾಂ ಅಧೀಕ್ಷಕ ಅಭಿಯಂತರ ಎಸ್.ಎಸ್. ಜಂಗಿನ, ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ದೀಪಕ ಮಡಿವಾಳರ, ಯೋಜನಾ ನಿರ್ದೇಶಕಿ ರೇಖಾ ಡೊಳ್ಳಿನ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸರೋಜಾ ಹಳಕಟ್ಟಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಕಿರಣಕುಮಾರ, ಮಾಜಿ ಸಂಸದ ಪ್ರೊ. ಐ.ಜಿ. ಸನದಿ, ಎಲ್ಲ ತಾಲೂಕುಗಳ ತಹಸೀಲ್ದಾರರು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರು.

ಧಾರವಾಡ ತಹಸಿಲ್ದಾರ ದೊಡ್ಡಪ್ಪ ಹೂಗಾರ, ಜನತಾ ದರ್ಶನದ ಅಹವಾಲುಗಳನ್ನು ನಿರ್ವಹಿಸಿ, ವಂದಿಸಿದರು. ಶಾಲಾ ಶಿಕ್ಷಣ ಇಲಾಖೆಯ ಜಯಲಕ್ಷ್ಮೀ ಎಚ್.ಕಾರ್ಯಕ್ರಮ ನಿರೂಪಿಸಿದರು.

> ಕಳೆದ ತಿಂಗಳ ಜಿಲ್ಲಾಮಟ್ಟದ ಜನತಾ ದರ್ಶನದಲ್ಲಿ ಸ್ವೀಕರಿಸಿದ್ದ ಸಾರ್ವಜನಿಕರ ಅಹವಾಲುಗಳಲ್ಲಿ ಶೇ 90ರಷ್ಟು ಅರ್ಜಿಗಳನ್ನು ಈಗಾಗಲೇ ನಿಯಮಾನುಸಾರ ಪರಿಶೀಲಿಸಿ, ವಿಲೇವಾರಿ ಮಾಡಲಾಗಿದೆ. ಸಂಬಂಧಿಸಿದ ಅರ್ಜಿದಾರರಿಗೆ ಎಸ್‌ಎಂಎಸ್ ಮೂಲಕ ಮಾಹಿತಿ ಹಾಗೂ ಸದರಿ ಅರ್ಜಿಗಳಿಗೆ ಹಿಂಬರಹ ನೀಡಲಾಗಿದೆ. ಉಳಿದ ಅರ್ಜಿಗಳನ್ನು ಇಲಾಖೆ ಹಿರಿಯ ಅಧಿಕಾರಿಗಳು ಪರಿಶೀಲಿಸುತ್ತಿದ್ದು, ಅವುಗಳನ್ನು ಸಹ ಕಾಲಮಿತಿಯಲ್ಲಿ ವಿಲೇವಾರಿ ಮಾಡಲಾಗುವುದು.
>
> **– ಸಂತೋಷ್ ಲಾಡ್.**
> ಜಿಲ್ಲಾ ಉಸ್ತುವಾರಿ ಸಚಿವರು.

# ತರಬೇತಿಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಿ



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಅಬ್ದುಲ್ ನಜೀರ್ ಸಾಬ್ ಸಂಸ್ಥೆಯಿಂದ ತಾ.ಪಂ ಸಾಮರ್ಥ್ಯ ಸೌಧದಲ್ಲಿ ನಿರಂತರವಾಗಿ ತರಬೇತಿಗಳು ನಡೆಯುತ್ತವೆ. ಚುನಾಯಿತ ಎಸ್‌ಸಿ/ಎಸ್‌ಟಿ ಪ್ರತಿನಿಧಿಗಳ ಸಾಮರ್ಥ್ಯ ಹೆಚ್ಚಿಸಲು ತರಬೇತಿಗಳನ್ನು ಆಯೋಜನೆ ಮಾಡುತ್ತಾ ಬಂದಿವೆ.

ಇಂದಿನಿಂದ 2ನೇ ಅವಧಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷ-ಉಪಾಧ್ಯಕ್ಷರು ಮೂರು ದಿನಗಳ ಈ ತರಬೇತಿಯಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಕಾರ್ಯನಿರ್ವಾಹಕ ಅಧಿಕಾರಿಗಳಾದ ವಿಶ್ವನಾಥ ಹೊಸಮನಿ ನುಡಿದರು.

ಎರಡನೇ ಅವಧಿಗೆ ನೂತನವಾಗಿ ಆಯ್ಕೆಯಾದ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಮೂರು ದಿನಗಳ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ತರಬೇತಿ ಸಂಯೋಜಕ ಮಂಜುನಾಥ ಮುಧೋಳ ಮಾತನಾಡಿ, ಮೂರು ದಿನಗಳ ತರಬೇತಿಯಲ್ಲಿ ಚಟುವಟಿಕೆಗಳು, ಆಟಗಳು, ಸ್ಥಳೀಯ ಚಟುವಟಿಕೆ, ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಗ್ರಾಮೀಣ ಅಭಿವೃದ್ಧಿ ಕುರಿತು ಯೋಜನೆ ತಯಾರಿಕೆ ಇನ್ನಿತರ ಮಾಹಿತಿಗಳನ್ನು ತರಬೇತಿಯಲ್ಲಿ ನೀಡಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ತಾ.ಪಂ ವ್ಯಸ್ಥಾಪಕಾಧಿಕಾರಿ ಜಗದೀಶ, ವಿಷಯ ನಿರ್ವಾಹಕರಾದ ಸಿ.ಬಿ. ಪಾಟೀಲ, ರವಿ ದೊಡ್ಡಮನಿ, ರತ್ನಾ ತಳವಾರ, ಸುನಿತಾ ಹಾರೋಗೇರಿ, ನಾಗವ್ವ ಬಳ್ಳಾರಿ, ಶಿವಲೀಲಾ ಬಂಡಿಹಾಳ, ಹುಲಿಗೆವ್ವ ಪಾಟೀಲ, ಅಬಾ ಸಾಹೇಬ ಬಹದ್ದೂರ ದೇಸಾಯಿ, ಮಲ್ಲಿಕಾರ್ಜುನ ಹಣಜಿ, ರಾಜಶೇಖರ ಗುಡ್ಲಾನೂರ, ಮರಿಯವ್ವ ಹಿರೇಮನಿ, ಗ್ರಾ.ಪಂ ಅಧ್ಯಕ್ಷ-ಉಪಾಧ್ಯಕ್ಷರು ಭಾಗವಹಿಸಿದರು.

# ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗಾಗಿ ಅರ್ಜಿ ಅಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

2022ನೇ ಸಾಲಿನ ಹಿರಿಯ ಕ್ರೀಡಾಪಟು/ತರಬೇತುದಾರರಾಗಿ ಸಾಧನೆ ಮಾಡಿರುವ ಕರ್ನಾಟಕದ ಹಿರಿಯ ಕ್ರೀಡಾಪಟುಗಳು/ತರಬೇತುದಾರರುಗಳಿಂದ ಜೀವಮಾನ ಸಾಧನೆ ಪ್ರಶಸ್ತಿಗಾಗಿ ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲು ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿಗಾಗಿ ಸೇವಾಸಿಂಧು ಆನ್‌ಲೈನ್ (ವೆಬ್‌ಸೈಟ್ http://sevasindhuservices.gov.in ) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯು ಆನ್‌ಲೈನ್‌ನ ಅಧಿಕೃತ ಜಾಲತಾಣ http://sevasindhu.service.karnataka.gov.in ರ ಮೂಲಕ ಲಭ್ಯವಿದ್ದು, ಅರ್ಜಿಗಳನ್ನು ಸಲ್ಲಿಸಿ ಸ್ವೀಕೃತಿ ಪತ್ರವನ್ನು ನವೆಂಬರ್ 30 ರೊಳಗಾಗಿ ಸಲ್ಲಿಸಬಹುದಾಗಿದೆ.

ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸುವವರು ಕ್ರೀಡಾ ಕ್ಷೇತ್ರದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಕ್ರೀಡಾಪಟುಗಳನ್ನು ಕೊಡುಗೆಯಾಗಿ ನೀಡಿ ಈ ಕ್ರೀಡಾ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸುತ್ತಿರಬೇಕು. ತರಬೇತುದಾರರು ನಾಯಕತ್ವದ ಗುಣ, ಕ್ರೀಡಾ ಮನೋಭಾವ ಮತ್ತು ಶಿಸ್ತುಬದ್ಧ ಜೀವನಕ್ಕೆ ಮಾದರಿಯಾಗಿರಬೇಕು. ಜೀವನಪರ್ಯಂತ ಸಾಧನೆ ಪ್ರಶಸ್ತಿಗೆ ಕರ್ನಾಟಕ ಓಲಂಪಿಕ್ ಸಂಸ್ಥೆ, ವಿವಿಧ ಕ್ರೀಡೆ, ರಾಜ್ಯ ಸಂಸ್ಥೆಗಳು, ಸಹಾಯಕ ನಿರ್ದೇಶಕರುಗಳು ಶಿಫಾರಸ್ಸು ಮಾಡಬಹುದಾಗಿದೆ ಹಾಗೂ ಪ್ರಶಸ್ತಿಗೆ ಅರ್ಜಿಗಳನ್ನು ಸಲ್ಲಿಸುವವರು ಕರ್ನಾಟಕದವರೇ ಆಗಿರಬೇಕು. ಪ್ರತಿ ವರ್ಷ ಓರ್ವ ಅರ್ಹ ತರಬೇತುದಾರರಿಗೆ ಮಾತ್ರ ಜೀವನ ಪರ್ಯಂತ ಸಾಧನೆ ಪ್ರಶಸ್ತಿ ನೀಡಲಾಗುವುದು. ಆಯ್ಕೆ ಅಂತಿಮ ನಿರ್ಧಾರ ರಾಜ್ಯ ಸರ್ಕಾರದ ಆಯ್ಕೆ ಸಮಿತಿಯದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಜಾಲತಾಣ http://sevasindhuservice.karnataka.gov.in ರ ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ನೇಹ ಎಲ್ಲವನ್ನೂ ಮೀರಿಸುವ ಸುಮಧುರವಾದ ಬಂಧ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

1982-83ರಲ್ಲಿ ಪಟ್ಟಣದ ಉಮಾ ವಿದ್ಯಾಲಯದಲ್ಲಿ ಎಸ್‌ಎಸ್‌ಎಲ್‌ಸಿ ಪೂರೈಸಿದ ಗೆಳೆಯರೆಲ್ಲರೂ ರವಿವಾರ ಪಟ್ಟಣದ ಎಪಿಎಂಸಿ ವರ್ತಕರ ಸಂಘದ ಸಭಾಭವನದಲ್ಲಿ ಸ್ನೇಹ ಸಮ್ಮಿಲನ ಮತ್ತು ಸಾಧಕ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಉದ್ಯಮಿ ಉತ್ತಮ್ ಜೈನ್ ಮಾತನಾಡಿ, ಸ್ನೇಹ ಎಲ್ಲವನ್ನೂ ಮೀರಿಸುವ ಸುಮಧುರವಾದ ಬಂಧವಾಗಿದೆ. ಸ್ನೇಹದ ಆತ್ಮೀಯತೆ, ಪ್ರೀತಿ, ವಿಶ್ವಾಸ, ಬಂಧುತ್ವಕ್ಕೆ ಬೆಲೆ ಕಟ್ಟಲಾಗದು. ಇಂತಹ ಸ್ನೇಹತ್ವಕ್ಕೆ ಬೆಲೆ ನೀಡಿ ಎಲ್ಲರೂ ಸಂಗಮವಾಗಿರುವದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ ಎಂದರು.

ಶಂಕರ ಕೋಳಿವಾಡ ಮಾತನಾಡಿ, ಸ್ನೇಹಕ್ಕಿಂತ ದೊಡ್ಡ ಸಂಪತ್ತು ಮತ್ತೊಂದಿಲ್ಲ. ವಿವಿಧ ಹುದ್ದೆಗಳಲ್ಲಿದ್ದು ಬದುಕು ಕಟ್ಟಿಕೊಂಡಿರುವ ಸ್ನೇಹಿತರು ಒಂದೆಡೆ ಸೇರುವುದೇ ದೊಡ್ಡ ಸಂಭ್ರಮ. ಸ್ನೇಹ ಬಾಂಧವ್ಯ ಚಿರಂತನವಾಗಿರಲಿ, ಅದಕ್ಕೆ ಧಕ್ಕೆ ಬರದಂತೆ ನಡೆದುಕೊಳ್ಳೋಣ ಎಂದರು.

ಈ ವೇಳೆ ಹಮಾಲಿ ವೃತ್ತಿಯ ನಡುವೆಯೂ ಸಮಾಜ ಸೇವೆ ಮಾಡುತ್ತಿರುವ ಫಕ್ಕೀರಪ್ಪ ನಾರಾಯಣಕರ, ಹಜರೇಸಾಬ ತಂಬಾಕದ, ಸುಮಾರು 5-6 ದಶಕಗಳಿಂದ ಬಸ್ ನಿಲ್ದಾಣದಲ್ಲಿ ಔಷಧಿಯುಕ್ತ ಅಲ್ಲಿಪಾಕ್ ಮಾರಾಟ ಮೂಲಕ ಪ್ರಾಮಾಣಿಕ ಬದುಕು ಸಾಗಿಸುತ್ತಿರುವ ಮಹ್ಮದಸಾಬ ಡಾಲಾಯತ್, ಪೌರ ಕಾರ್ಮಿಕನಾಗಿ ಸೇವೆ ಸಲ್ಲಿಸಿದ ಬಸವಣ್ಣೆಪ್ಪ ನಂದೆಣ್ಣವರ ಅವರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜಿ.ಎಸ್. ಬಾಳಿಹಳ್ಳಿಮಠ, ವಾಸು ಪಾಟೀಲ, ಪ್ರಕಾಶ ಬಾಳೇಶ್ವರಮಠ, ರಮೇಶ ಕಾಯಕದ, ಗಂಗಾಧರ ಬಾಳಿಕಾಯಿ, ಆಯ್.ಎಚ್. ಪಾಟೀಲ, ಗೋವಿಂದಗೌಡ ಪಾಟೀಲ, ರಾಜು ರಾಯಚೂರ, ಶೇಖರಗೌಡ ಪಾಟೀಲ, ಸತೀಶ ಅಗಡಿ, ರಮೇಶ ಮರಾಠೆ, ರಾಜು ಪಾಟೀಲ, ಆರೀಫ್ ಸೇರಿದಂತೆ ಸುಮಾರು 50ಕ್ಕೂ ಅಧಿಕ ಸ್ನೇಹಿತರು ಸೇರಿ ಸಂಭ್ರಮಿಸಿದರು.

# ಬಿಲ್ವಪತ್ರೆ ವನಕ್ಕೆ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಭೇಟಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ನಿಡಗುಂದಿಕೊಪ್ಪ ಶ್ರೀಮಠಕ್ಕೆ ಹಾಗೂ ನಿಡಗುಂದಿಯ ಬಿಲ್ವಪತ್ರೆ ವನಕ್ಕೆ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪನವರು ರವಿವಾರ ಭೇಟಿ ನೀಡಿ, ಲಿಂ. ಚನ್ನಬಸವ ಸ್ವಾಮೀಜಿ ಹಾಗೂ ಶಿವಬಸವ ಸ್ವಾಮೀಜಿಗಳವರ ಕರ್ತೃ ಗದ್ದುಗೆಗೆ ನಮಿಸಿ ಶ್ರೀಮಠದ ಸ್ವಾಮೀಜಿಯವರ ದರ್ಶನಾಶೀರ್ವಾದ ಪಡೆದುಕೊಂಡರು.

ಬಳಿಕ ನಿಡಗುಂದಿ ಗ್ರಾಮದ ಬಿಲ್ವಪತ್ರೆ ವನಕ್ಕೆ ತೆರಳಿದ ಅವರು, ನೂತನವಾಗಿ ಪ್ರತಿಷ್ಠಾಪನೆಗೊಂಡಿರುವ ಕಾರುಣಿಕ ಯುಗಪುರುಷ ಹಾನಗಲ್ಲ ಲಿಂ. ಶ್ರೀಗುರು ಕುಮಾರೇಶ್ವರರ ಶಿಲಾ ಮೂರ್ತಿಗೆ ವಿಶೇಷ ಪೂಜೆಯನ್ನು ಸಲ್ಲಿಸಿದರು. ಈ ವೇಳೆಯಲ್ಲಿ ಅವರು ಬಿಲ್ವಪತ್ರೆ ವನವನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಶಾಖಾ ಶಿವಯೋಗ ಮಂದಿರ ನಿಡಗುಂದಿಕೊಪ್ಪ ಶ್ರೀಮಠದ ಅಭಿನವ ಚನ್ನಬಸವ ಸ್ವಾಮೀಜಿಯವರು ಹಾಗೂ ಅಂಕಲಗಿಯ ಶ್ರೀಮಠದ ಅಡವಿ ಸಿದ್ದರಾಮ ಸ್ವಾಮೀಜಿಯವರು ನೆನಪಿನ ಕಾಣಿಕೆಯನ್ನು ನೀಡಿ ಸನ್ಮಾನಿಸಿದರು.

ನಂತರ ಮಾತನಾಡಿದ ಈಶ್ವರಪ್ಪ, ಶಾಖಾ ಶಿವಯೋಗ ಮಂದಿರ ನಿಡಗುಂದಿಕೊಪ್ಪ ಶ್ರೀಮಠದ ಮಹಿಮೆ ಅಪಾರ. ಪುಣ್ಯ ಪುರುಷರು ನೆಲೆಸಿರುವ ಈ ತಾಣ ಪರಮ ಪವಿತ್ರವಾದದ್ದು. ಮಹಾ ತಪಸ್ವಿಗಳು, ಭವರೋಗ ವೈದ್ಯರು ಲಿಂ. ಚನ್ನಬಸವ ಶಿವಯೋಗಿಗಳು ಹಾಗೂ ಲಿಂ. ಶಿವಬಸವ ಶಿವಯೋಗಿಗಳು ಇಂತಹ ಮಹಿಮ ಪುರುಷರು ನಡೆದಾಡಿದ ಈ ಪಾವನ ಸನ್ನಿಧಾನದಲ್ಲಿ ಜನಿಸಿದ ನೀವೇ ಧನ್ಯರು ಎಂದು ಭಕ್ತಾದಿಗಳಿಗೆ ಹೇಳಿದರು.

ಕಾರ್ಯಕ್ರಮದಲ್ಲಿ ರಾಜಕೀಯ ಮುಖಂಡರು, ಗ್ರಾಮದ ಸುತ್ತಮುತ್ತಲಿನ ಸದ್ಭಕ್ತರು ಪಾಲ್ಗೊಂಡಿದ್ದರು.



VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka